# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1125
2. ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ. ಎನ್.ರವಿಕುಮಾರ್. (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 21.08.2025
4. ಉತ್ತರಿಸುವ ಸಚಿವರು : ಗೃಹ ಸಚಿವರು.

| ಕ್ರಮ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಅತೀ ದೊಡ್ಡ ಪ್ರಮಾಣದಲ್ಲಿ ಮಾದಕ ವಸ್ತುಗಳು ಪತ್ತೆಯಾಗುತ್ತಿದ್ದು, ಈ ಕುರಿತು ಸರ್ಕಾರದ ನಿಲುವೇನು : ಕಳೆದ ಎರಡು ವರ್ಷಗಳಲ್ಲಿ ಡ್ರಗ್ಸ್ ಕುರಿತು ಎಷ್ಟು ಪ್ರಕರಣಗಳು ದಾಖಲಾಗಿವೆ? (ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯವನ್ನು ಡ್ರಗ್ಸ್/ಮಾದಕ ವಸ್ತುಗಳ ಮುಕ್ತ ರಾಜ್ಯವನ್ನಾಗಿಸುವುದು ಸರ್ಕಾರದ ನಿಲುವಾಗಿದೆ.<br>ಈ ಹಿನ್ನಲೆಯಲ್ಲಿ ಮಾದಕ ವಸ್ತುಗಳ ಸೇವನೆ, ಮಾರಾಟ, ಸಾಗಾಣೆ ಕುರಿತಂತೆ ವರದಿಯಾಗುವ ಪ್ರತಿ ದೂರು/ಮಾಹಿತಿಯನ್ನು ಗಂಭೀರವಾಗಿ ಪರಿಗಣಿಸಿ, ಎನ್.ಡಿ.ಪಿ.ಎಸ್. ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿಕೊಂಡು, ಮಾದಕ ವಸ್ತಗಳನ್ನು ಜಪ್ತಿಪಡಿಸಿಕೊಳ್ಳುವ ಮೂಲಕ ನಿರ್ಧಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br>ರಾಜ್ಯದಲ್ಲಿ 2023, 2024 ಮತ್ತು 2025 ಜುಲೈ ಅಂತ್ಯದವರಗೆ ಎನ್.ಡಿ.ಪಿ.ಎಸ್ ಕಾಯ್ದೆ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ:<br>**ವರ್ಷ** — **ಎನ್.ಡಿ.ಪಿ.ಎಸ್ ಯಡಿ ದಾಖಲಾದ ಪ್ರಕರಣಗಳ ಸಂಖ್ಯೆ**<br>2023 — 6767<br>2024 — 4188<br>2025 (ಜುಲೈ ಅಂತ್ಯಕ್ಕೆ) — 3530<br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |
| (ಆ) | ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿಯನ್ನು ಮುಂಬೈ ಪೊಲೀಸ್‌ರು ಪತ್ತೆ ಮಾಡಿದ್ದು, ಇದು ಸ್ಥಳೀಯ ಪೊಲೀಸ್ ನಿರ್ಲಕ್ಷತೆಗೆ ಸಾಕ್ಷ್ಯ ಎಂಬುದರ ಬಗ್ಗೆ ಸರ್ಕಾರದ ನಿಲುವೇನು; ಕರ್ತವ್ಯದಲ್ಲಿ ನಿರ್ಲಕ್ಷ್ಯವಹಿಸಿದ ಎಷ್ಟು ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿದೆ; (ಹೆಸರಿನೊಂದಿಗೆ ವಿವರ ನೀಡುವುದು) | **ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿ ಕುರಿತಂತೆ ವರದಿಯಾಗಿರುವ ಪ್ರಕರಣದ ವಿವರಗಳು:**<br>ಮುಂಬೈ ನಗರದ ಸಾಕಿನಾಕ ಪೊಲೀಸ್ ಠಾಣೆಯ ಮೊ.ನಂ. 296/2025 ಕಲಂ. 8(ಸಿ), 22(ಸಿ), 29 ಎನ್.ಡಿ.ಪಿ.ಎಸ್. ಕಾಯ್ದೆ ಮತ್ತು ಕಲಂ. 111 ಬಿ.ಎನ್.ಎಸ್. ಕಾಯ್ದೆ 2023ರ ಪ್ರಕರಣದಲ್ಲಿ ದಸ್ತಗಿರಿಯಾಗಿದ್ದ ಮುಂಬೈ ನಿವಾಸಿಯಾದ ಆರೋಪಿ ಸಲೀಂ ಇಮ್ತಿಯಾಜ್ ಶೇಖ್, ವಯಸ್ಸು 47 ವರ್ಷ ಈತನ ಮಾಹಿತಿಯ ಮೇರೆಗೆ ಮುಂಬೈ ನಗರದ ಸಾಕಿನಾಕ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಮೈಸೂರು ನಗರ ನರಸಿಂಹರಾಜ ಪೊಲೀಸ್ ಠಾಣೆಯ ಠಾಣಾಧಿಕಾರಿಗಳೊಂದಿಗೆ ದಿನಾಂಕ: 26/07/2025 ರಂದು |

| | | |
|---|---|---|
| | | ಜಂಟಿ ಕಾರ್ಯಾಚರಣೆ ನಡೆಸಿ 04 ಜನ ಆರೋಪಿಗಳನ್ನು ದಸ್ತಗಿರಿ ಮಾಡಿರುತ್ತಾರೆ.<br><br>ಮೇಲ್ಕಂಡ ಪ್ರಕರಣದಲ್ಲಿನ ಆರೋಪಿಯಾದ ಸಲೀಂ ಇಮ್ತಿಯಾಜ್ ಶೇಖ್ ಈತನು ನೀಡಿದ ಹೇಳಿಕೆಯಲ್ಲಿ ಮೈಸೂರು ನಗರದಲ್ಲಿ ಮೊದಲ ಬಾರಿಗೆ ಜುಲೈ ಮೊದಲನೇ ವಾರದಲ್ಲಿ ಮಾದಕ ವಸ್ತು ತಯಾರಿಸುವ ಘಟಕವನ್ನು ಪ್ರಾರಂಭಿಸಿರುವುದಾಗಿ ತಿಳಿಸಿದ ಮೇರೆಗೆ ಮೈಸೂರು ನಗರ ಪೊಲೀಸ್ ಹಾಗೂ ಮುಂಬೈ ಪೊಲೀಸರು ಜಂಟಿ ಕಾರ್ಯಾಚರಣೆಯಲ್ಲಿ ಮಾದಕ ವಸ್ತು ತಯಾರಿಸುವ ಘಟಕವನ್ನು ಪತ್ತೆ ಮಾಡಲಾಗಿದೆ.<br><br>ಸದರಿ ಘಟನೆಗೆ ಸಂಬಂಧಿಸಿದಂತೆ ಬೀಟ್ ಹಾಗೂ ಗುಪ್ತ ಮಾಹಿತಿ ಸಂಗ್ರಹಿಸುವ ಸಿಬ್ಬಂದಿಗಳು ಮಾಹಿತಿ ಸಂಗ್ರಹಿಸುವಲ್ಲಿ ವಿಫಲತೆ ಹೊಂದಿರುವವರನ್ನು ಅಮಾನತ್ತುಗೊಳಿಸಲಾಗಿದೆ. ಸದರಿ ಸಿಬ್ಬಂದಿಗಳ ವಿವರಗಳು ಈ ಕೆಳಕಂಡಂತಿದೆ:<br>1. ಶ್ರೀ ಎಲ್. ಅನಿಲ್ ಕುಮಾರ್. ಸಿಪಿಸಿ-500, ಬೀಟ್ ಸಿಬ್ಬಂದಿ<br>2. ಶ್ರೀ ಆಂಜನೇಯ, ಹೆಚ್.ಸಿ.-584, ಠಾಣಾ ಗುಪ್ತ ಮಾಹಿತಿ ಸಂಗ್ರಹಿಸುವ ಸಿಬ್ಬಂದಿ. |
| (ಇ) | ಸರ್ಕಾರವು ಡ್ರಗ್ಸ್ ಮಾರಾಟಗಾರರಿಗೆ ಪ್ರೋತ್ಸಾಹ ನೀಡುತ್ತಿದೆಯೇ : ಅಥವಾ ಪೊಲೀಸ್ ಇಲಾಖೆ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆ ಈ ಕುರಿತು ಸರ್ಕಾರದ ನಿಲುವೇನು: | ರಾಜ್ಯ ಸರ್ಕಾರವು ಡ್ರಗ್ಸ್ ಪ್ರಕರಣಗಳಲ್ಲಿನ ಆರೋಪಿಗಳ ವಿರುದ್ಧ ನಿರ್ಧಾಕ್ಷಿಣ್ಯ ಕ್ರಮ ಕೈಗೊಳ್ಳುವ ಧ್ಯೇಯವನ್ನು ಹೊಂದಿದ್ದು, ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯು ಎನ್.ಡಿ.ಪಿ.ಎಸ್. ಕಾಯ್ದೆ ಪ್ರಕರಣಗಳ ತನಿಖೆಯನ್ನು ಅತಿ ಸೂಕ್ಷ್ಮವಾಗಿ ಪರಿಗಣಿಸಿ, ಕ್ರಮಬದ್ಧ ಹಾಗೂ ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ.<br><br>**ರಾಜ್ಯವನ್ನು ಮಾದಕ ಮುಕ್ತ ರಾಜ್ಯವನ್ನಾಗಿ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮಗಳು**<br><br>➢ 1. ರಾಜ್ಯದಲ್ಲಿ ಮಾದಕ ವಸ್ತುಗಳ ನಿಯಂತ್ರಣ ಕುರಿತಂತೆ, ಸರ್ಕಾರದ ಆದೇಶ ಸಂಖ್ಯೆ: ಹೆಚ್ ಡಿ/141/ಪಿಓಪಿ/2025 ದಿನಾಂಕ: 02/08/2025ರಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳಲ್ಲಿ ನಾರ್ಕೋಟಿಕ್ಸ್ ಸಂಬಂಧ ದಾಖಲಾಗುವ ಪ್ರಕರಣಗಳ ಮೇಲ್ವಿಚಾರಣೆಗಾಗಿ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ (Anti Narcotics Task Force) ಘಟಕವನ್ನು ಸೃಜಿಸಲಾಗಿದೆ. ಈ ಕಾರ್ಯ ಪಡೆಯು ದಿನಾಂಕ:02.08.2025 ರಂದು ರಚನೆಯಾಗಿರುತ್ತದೆ.<br><br>➢ . ಮಾದಕ ಬೆಳೆಗಳ ಗುರುತಿಸುವಿಕೆ ಮತ್ತು ನಾಶ, ಅಕ್ರಮ ಮಾದಕ ವ್ಯಸನವನ್ನು ಪತ್ತೆ ಹಚ್ಚಲು ಮತ್ತು ನಿರ್ಮೂಲನೆ ಮಾಡಲು ರಾಜ್ಯಾದ್ಯಂತ ಪೊಲೀಸ್ ಸಿಬ್ಬಂದಿಗೆ NCB (ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ) ಆನ್‌ಲೈನ್ ಕಾರ್ಯಾಗಾರಗಳ ಮೂಲಕ ತರಬೇತಿ ನೀಡಲಾಗುತ್ತಿದೆ. ಈ ಉದ್ದೇಶಕ್ಕಾಗಿ NCB ಮೊಬೈಲ್ ಅಪ್ಲಿಕೇಶನ್/ವೆಬ್ ಪೋರ್ಟಲ್ MAPDRUGS ಅನ್ನು ಸಹ ಪರಿಚಯಿಸಲಾಗಿದೆ. |

| | | |
|---|---|---|
| | | ➢ ಮಾದಕವಸ್ತು ಸಂಬಂಧಿತ ಪ್ರಕರಣಗಳಲ್ಲಿ ರಾಜ್ಯ ಪೊಲೀಸರ ತನಿಖಾ ಸಾಮರ್ಥ್ಯಗಳನ್ನು ಹೆಚ್ಚಿಸಲು NCB ಮತ್ತು ಇತರ ಏಜೆನ್ಸಿಗಳ ಸಹಯೋಗದೊಂದಿಗೆ ಆರು ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ. ಉಪ ಅಧೀಕ್ಷಕರವರಿಗೆ (ಡಿವೈಎಸ್ಪಿ), ಪೊಲೀಸ್ ನಿರೀಕ್ಷಕರು ಮತ್ತು ಅಬಕಾರಿ ಅಧಿಕಾರಿಗಳಿಗೆ ವಿಶೇಷ ತರಬೇತಿಯನ್ನು ನೀಡಲಾಗಿರುತ್ತದೆ. ಮತ್ತಷ್ಟು ಸಾಮರ್ಥ್ಯ ನಿರ್ಮಾಣ ಕಾರ್ಯಾಗಾರಗಳನ್ನು ಯೋಜಿಸಲಾಗಿದೆ.<br><br>➢ ತರಬೇತಿ ಕಾರ್ಯಕ್ರಮಗಳು:- ಸಿಐಡಿ ಅಧಿಕಾರಿಗಳನ್ನು ಭೋಪಾಲ್ ನಲ್ಲಿರುವ ಸೆಂಟ್ರಲ್ ಅಕಾಡೆಮಿ ಫಾರ್ ಪೊಲೀಸ್ ಟ್ರೈನಿಂಗ್ (ಸಿಎಪಿಟಿ) ತರಬೇತುದಾರರಿಗಾಗಿ ತರಬೇತಿ (TOT) ಹಾಗೂ ಮಾದಕ ದ್ರವ್ಯ ತನಿಖೆಯ ಮೇಲೆ ಕೇಂದ್ರೀಕರಿಸಿದ ಕಾರ್ಯಕ್ರಮಗಳಿಗೆ ಕಳುಹಿಸಲಾಗಿದೆ. NDPS ಕಾಯ್ದೆ (Narcotic Drugs and Psychotropic Substances Act-1985) ಕುರಿತು ಇತರ ಸಿಬ್ಬಂದಿಗೆ ಪೊಲೀಸ್ ತರಬೇತಿ ಶಾಲೆಗಳಲ್ಲಿ ಇದೇ ರೀತಿಯ ತರಬೇತಿಯನ್ನು ನೀಡಲಾಗುತ್ತಿದೆ.<br><br>➢ ಬೆಂಗಳೂರು ಪೊಲೀಸರು ಅಕ್ರಮ ಮಾದಕ ದ್ರವ್ಯ ಚಟುವಟಿಕೆಗಳಲ್ಲಿ ತೊಡಗಿರುವ ವಿದೇಶಿಗರು ವಾಸಿಸುವ ಪ್ರದೇಶಗಳ ಮೇಲೆ ಸೂಕ್ತ ನಿಗಾ ವಹಿಸಿ ಅಕ್ರಮ ಚಟುವಟಿಕೆ ಮೇಲೆ ನಿಯಂತ್ರಣ ಸಾಧಿಸಲಾಗಿದೆ.<br><br>➢ ಮಾದಕ ದ್ರವ್ಯ ಸೇವನೆ, ಮಾರಾಟ, ಸಂಗ್ರಹಣೆ ಮತ್ತು ಸರಬರಾಜು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವ ಸಲುವಾಗಿ ಸಿಐಡಿ ಘಟಕದಲ್ಲಿ ವಿಶೇಷ ತರಬೇತಿ ನೀಡುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈಗಾಗಲೇ ರಾಜ್ಯದಲ್ಲಿ 167 ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆ.<br><br>➢ ಜೂನ್ 26, 2025 ರಂದು "ಡ್ರಗ್ಸ್ ದುರುಪಯೋಗ ಮತ್ತು ಅಕ್ರಮ ಸಾಗಣೆಕೆ ವಿರುದ್ಧ ಅಂತರ ರಾಷ್ಟ್ರೀಯ ದಿನಾಚರಣೆ" ಅಂಗವಾಗಿ ಸುಮಾರು 4000 ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಗಾರ ಆಯೋಜಿಸಿ ತಿಳುವಳಿಕೆ ನೀಡಲಾಗಿದೆ.<br><br>➢ Drugs Free Karnataka Mobile App ಅನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿ, ಮಾದಕವಸ್ತು ಬಳಕೆ, ಸಂಗ್ರಹಣೆ, ಸರಬರಾಜು ಮೇಲೆ ನಿಯಂತ್ರಣ ಸಾಧಿಸುವ ನಿಟ್ಟಿನಲ್ಲಿ ದಿಟ್ಟ ಕ್ರಮಕೈಗೊಳ್ಳಲಾಗುತ್ತಿದೆ.<br><br>➢ NDPS ಪ್ರಕರಣಗಳಲ್ಲಿನ ಆರೋಪಿಗಳ ಮಾಹಿತಿಯನ್ನು ಪೊಲೀಸ್ ಐಟಿ ತಂತ್ರಾಂಶ-National Integrated Database on Arrested Narco Offenders - NIDAAN ಪೋರ್ಟಲ್‌ನಲ್ಲಿ ದಾಖಲಿಸಿ ನಿರ್ವಹಿಸಲಾಗುತ್ತಿದೆ. ಆರೋಪಿಗಳ ದತ್ತಾಂಶ ವಿಶ್ಲೇಷಣೆ ಮಾಡಿ ಆರೋಪಿಗಳ ಚಲನವಲನಗಳ ಮೇಲೆ ನಿಗಾವಹಿಸಲಾಗಿದೆ. |

<table>
<tr>
<td></td>
<td></td>
<td>

- ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ NCORD (Narcotics Co- ordination) ಸಮಿತಿ ರಚನೆಗೊಂಡಿರುತ್ತದೆ. NDPS ಕಾಯ್ದೆ ಜಾರಿಗೊಳಿಸುವ ಸಂಬಂಧ ಇತರೆ ಇಲಾಖೆಯ ಸಮನ್ವಯದೊಂದಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.
- ಎನ್.ಡಿ.ಪಿ.ಎಸ್ ಪ್ರಕರಣಗಳಲ್ಲಿ ಭಾಗಿಯಾಗುವ ವಿದೇಶಿ ಪ್ರಜೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಭಾಗಿಯಾಗುವ ಆರೋಪಿಗಳನ್ನು Passport Act-1920, Foreigners Act-1946 & Foreigners Order-1948ರ ಅಡಿಯಲ್ಲಿ ಗಡಿಪಾರು ಪ್ರಕ್ರಿಯೆ ಕೈಗೊಳ್ಳಲು ಕ್ರಮ ಜರುಗಿಸಲಾಗುತ್ತಿದೆ.
- PITNDPS-1988ರ ಕಾಯ್ದೆ ಅನ್ವಯವಾಗುವ ಆರೋಪಿಗಳ ಆರೋಪಿಗಳ ವಿರುದ್ಧ ನಿಯಾಮಾನುಸಾರ ಬಂಧನ ಕ್ರಮ ಜರುಗಿಸಿ ಮಾನ್ಯ PITNDPS ಸಲಹಾ ಮಂಡಳಿಯ ಮುಂದೆ ಬಂಧಿತ ಆರೋಪಿಯನ್ನು ಹಾಜರುಪಡಿಸಿ, ಮಾನ್ಯ ಸಲಹಾ ಮಂಡಳಿಯ ವರದಿಯನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.
- ಡ್ರಗ್ಸ್ ದಂಧೆಯನ್ನು ಸಂಪೂರ್ಣ ಮಟ್ಟ ಹಾಕಲು ಮತ್ತು ಪೆಡ್ಲರ್‌ಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು NDPS-1985ರ Chapter V / PITNDPS-1988ರ ಕಾಯ್ದೆಗಳು ಮತ್ತು ನಿಯಮಗಳಡಿಯಲ್ಲಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ.
- ಕರ್ನಾಟಕ ರಾಜ್ಯವನ್ನು ದುರುಪಯೋಗದಿಂದ ಮುಕ್ತಗೊಳಿಸುವುದಕ್ಕೆ, ಯುವ ಜನತೆಗೆ ನಶೆಯಿಂದ ಉಂಟಾಗುವ ದೈಹಿಕ, ಮಾನಸಿಕ, ಸಾಮಾಜಿಕ ಹಾನಿಗಳ ಬಗ್ಗೆ ಜಾಗೃತಿ ಮೂಡಿಸುವುದಕ್ಕೆ, ಪುನರ್ವಸತಿ, ಕೇಂದ್ರಗಳು, ಸಲಹಾ ಕೇಂದ್ರಗಳು ಮತ್ತು ಸಲಹಾ ಸೇವೆಗಳ ಮೂಲಕ ಪೀಡಿತ ವ್ಯಸನಿಗಳನ್ನು ಸಮಾಜದಲ್ಲಿ ಮರುಸ್ಥಾಪಿಸುವುದಕ್ಕೆ ಸಮುದಾಯದ ಭಾಗವಹಿಸುವಿಕೆ ಮೂಲಕ ಪರಿಹಾರ ಸಾಧಿಸುವುದಕ್ಕೆ, ನಿರಂತರವಾಗಿ ಇತರೆ ಎಲ್ಲಾ ಇಲಾಖೆಗಳ ಸಹಭಾಗಿತ್ವ ಮತ್ತು ಸಮನ್ವಯದೊಂದಿಗೆ ಶ್ರಮಿಸುತ್ತಿರುತ್ತದೆ.

</td>
</tr>
<tr>
<td>(ಈ)</td>
<td>ಕಳೆದ 3 ವರ್ಷಗಳಲ್ಲಿ ಪೊಲೀಸರು ದಾಖಲಿಸಿದ ಡ್ರಗ್ಸ್ ಪ್ರಕರಣಗಳು ನ್ಯಾಯಾಲಯದಲ್ಲಿ ಖುಲಾಸೆಯಾಗುತ್ತಿರುವುದಕ್ಕೆ ಕಾರಣಗಳೇನು: ನ್ಯಾಯಾಲಯಕ್ಕೆ ಪೂರಕ ದಾಖಲೆಗಳನ್ನು ಒದಗಿಸದೆ ಪ್ರಕರಣಗಳ ಖುಲಾಸೆಗೆ ಸಹಕರಿಸುತ್ತಿರುವ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ : ಕಳೆದ ಎರಡು ವರ್ಷಗಳಲ್ಲಿ ಎಷ್ಟು ಪ್ರಕರಣಗಳು ನ್ಯಾಯಾಲಯದಲ್ಲಿ ಖುಲಾಸೆಗೊಂಡಿವೆ? (ಪ್ರಕರಣವಾರು ವಿವರ ನೀಡುವುದು)</td>
<td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಎನ್.ಡಿ.ಪಿ.ಎಸ್. ಕಾಯ್ದೆ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಮತ್ತು ಖುಲಾಸೆಗೊಂಡ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ:
<table>
<tr><th>ವರ್ಷ</th><th>ದಾಖಲಾದ ಪ್ರಕರಣಗಳ ಸಂಖ್ಯೆ</th><th>ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ</th><th>ಖುಲಾಸೆಗೊಂಡ ಪ್ರಕರಣಗಳ ಸಂಖ್ಯೆ</th></tr>
<tr><td>2023</td><td>6767</td><td>3275</td><td>32</td></tr>
<tr><td>2024</td><td>4188</td><td>1577</td><td>92</td></tr>
<tr><td>2025 (ಜುಲೈ ಅಂತ್ಯಕ್ಕೆ)</td><td>3530</td><td>452</td><td>66</td></tr>
</table>
</td>
</tr>
</table>

ಖುಲಾಸೆಗೊಂಡ ಪ್ರಕರಣಗಳ ಪ್ರಕರಣಾವಾರು ಮಾಹಿತಿಯನ್ನು **ಅನುಬಂಧ-2 ರಲ್ಲಿ** ಒದಗಿಸಲಾಗಿದೆ.

ಎನ್.ಡಿ.ಪಿ.ಎಸ್. ಕಾಯ್ದೆಯ ಪ್ರಕರಣಗಳಲ್ಲಿ ತನಿಖಾಧಿಕಾರಿಗಳ ಲೋಪದೋಷಗಳಿಂದ ಖುಲಾಸೆಗೊಂಡ ಪ್ರಕರಣಗಳಲ್ಲಿ ಒಟ್ಟು 15 ಅಧಿಕಾರಿಗಳ ಮೇಲೆ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗಿದೆ. ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ.

ಖುಲಾಸೆ ಪ್ರಕರಣಗಳನ್ನು ವಿರ್ಮಶಿಸಲು ರಾಜ್ಯ ಮಟ್ಟದ, ವಲಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ Acquittal Review Committee ಗಳನ್ನು ಸ್ಥಾಪಿಸಲಾಗಿದೆ. ಈ ಸಮಿತಿಗಳು ಖುಲಾಸೆಗೊಂಡ ಪ್ರಕರಣಗಳನ್ನು ವಿರ್ಮಶೆ ಮಾಡಿ, ಖುಲಾಸೆಗೆ ಕಾರಣರಾದರ ಮೇಲೆ ನಿಯಮಗಳಡಿಯಲ್ಲಿ ನೋಟೀಸ್ ಜಾರಿ ಮಾಡಿ, ನಂತರ ಇಲಾಖಾ ವಿಚಾರಣೆಗೆ ಆದೇಶಿಸಿ, ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.

ಡ್ರಗ್ಸ್ /ಎನ್.ಡಿ.ಪಿ.ಎಸ್. ಪ್ರಕರಣಗಳು ವಜಾ / ಖುಲಾಸೆ ಗೊಳ್ಳಲು ಈ ಕೆಳಕಂಡ ಅಂಶಗಳು ಪ್ರಮುಖ ಕಾರಣಗಳಾಗಿರುತ್ತದೆ.

ಎನ್‌ಡಿಪಿಎಸ್ ಕಾಯ್ದೆಯ ಬಹುತೇಕ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಆರೋಪಿಯನ್ನು ತಪ್ಪಿತಸ್ಥನೆಂದು ಸಾಬೀತುಪಡಿಸಲು ಬೇಕಾದ ಪ್ರಕ್ರಿಯಾತ್ಮಕ ಅನುಸರಣೆ (Procedural Compliance) ಕೊರತೆ, ಸಾಕ್ಷ್ಯಗಳ ಕೊರತೆ ಮತ್ತು ತನಿಖಾ ದೋಷಗಳು ಮುಖ್ಯ ಕಾರಣಗಳಾಗಿವೆ.

1. ಕಡ್ಡಾಯ ವಿಧಿ/ನಿಯಮಗಳನ್ನು ಪಾಲಿಸದಿರುವುದು
2. ದೋಷಪೂರಿತ ಹುಡುಕಾಟ ಮತ್ತು ವಶಪಡಿಸಿಕೆ
3. ಸಾಕ್ಷ್ಯ ಸರಪಳಿ (Chain of Custody) ದೋಷಗಳು
4. ವೈಜ್ಞಾನಿಕ ಸಾಕ್ಷ್ಯಗಳ ಕೊರತೆ
5. ಪ್ರತಿಕೂಲ ಸಾಕ್ಷಿದಾರರು
6. ತನಿಖಾ ದೋಷಗಳು
7. ಚಾರ್ಜ್‌ಶೀಟ್ ಸಲ್ಲಿಕೆಯಲ್ಲಿ ವಿಳಂಬ
8. ಪೂರಕ ಸಾಕ್ಷ್ಯಗಳ ಕೊರತೆ
9. ಆರೋಪಿಗೆ ಸಂದೇಹದ ಲಾಭ
10. ನ್ಯಾಯಾಲಯದಲ್ಲಿ ಪ್ರಕರಣ ಪ್ರಸ್ತುತಪಡಿಸುವ ದೋಷಗಳು

(ಡಾ: ಜಿ . ಪರಮೇಶ್ವರ)
ಗೃಹ ಸಚಿವರು

ಒಇ 49 ಪಿಎನ್‌ಡಿ 2025 (ಇ)

## ಅನುಬಂಧ-1

## ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಿಸಿರುವ ಜಿಲ್ಲಾವಾರು ಮಾಹಿತಿ

| Sl. No. | Unit Name | 2023 | | | 2024 | | | 2025 | | |
|---|---|---|---|---|---|---|---|---|---|---|
| | | Rep | Convicted | Acquittal | Rep | Convicted | Acquittal | Rep | Convicted | Acquittal |
| 1 | Bagalkot | 17 | 5 | 0 | 18 | 2 | 0 | 39 | 3 | 3 |
| 2 | Ballari | 54 | 8 | 1 | 29 | 1 | 3 | 20 | 0 | 3 |
| 3 | Belagavi City | 23 | 0 | 1 | 55 | 2 | 3 | 97 | 1 | 3 |
| 4 | Belagavi Dist | 59 | 6 | 1 | 50 | 10 | 25 | 48 | 1 | 6 |
| 5 | Bengaluru City | 3495 | 1760 | 1 | 520 | 5 | 0 | 405 | 4 | 2 |
| 6 | Bengaluru South | 222 | 48 | 0 | 62 | 8 | 0 | 117 | 21 | 0 |
| 7 | Bengaluru Dist | 97 | 43 | 0 | 38 | 7 | 0 | 46 | 6 | 0 |
| 8 | Bidar | 32 | 0 | 15 | 24 | 0 | 18 | 19 | 0 | 12 |
| 9 | Chamarajanagar | 38 | 10 | 0 | 37 | 3 | 0 | 39 | 1 | 0 |
| 10 | Chickballapura | 33 | 3 | 0 | 26 | 6 | 1 | 29 | 6 | 1 |
| 11 | Chikkamagaluru | 222 | 165 | 1 | 227 | 150 | 2 | 143 | 40 | 0 |
| 12 | Chitradurga | 71 | 32 | 2 | 66 | 37 | 8 | 66 | 15 | 0 |
| 14 | Coastal Security Police | 1 | 1 | 0 | 23 | 19 | 0 | 7 | 2 | 0 |
| 15 | Dakshina Kannada | 66 | 39 | 0 | 44 | 23 | 0 | 10 | 1 | 0 |
| 16 | Davanagere | 90 | 55 | 0 | 173 | 115 | 0 | 188 | 58 | 0 |
| 17 | Dharwad | 18 | 2 | 0 | 19 | 3 | 0 | 21 | 0 | 0 |
| 18 | Gadag | 21 | 3 | 0 | 23 | 7 | 3 | 26 | 6 | 1 |
| 19 | Hassan | 80 | 48 | 0 | 130 | 59 | 0 | 64 | 6 | 0 |
| 20 | Haveri | 20 | 6 | 0 | 19 | 8 | 2 | 11 | 1 | 1 |
| 21 | Hubballi Dharwad City | 87 | 15 | 0 | 244 | 48 | 0 | 168 | 2 | 0 |
| 23 | K.G.F | 55 | 31 | 0 | 26 | 7 | 1 | 25 | 8 | 4 |
| 24 | Kalaburagi | 56 | 19 | 2 | 22 | 2 | 11 | 14 | 1 | 3 |
| 25 | Kalaburagi City | 51 | 7 | 0 | 53 | 14 | 0 | 285 | 61 | 1 |
| 26 | Karnataka Railways | 57 | 1 | 0 | 59 | 0 | 0 | 46 | 0 | 0 |
| 27 | Kodagu | 101 | 38 | 0 | 86 | 40 | 0 | 93 | 2 | 0 |
| 28 | Kolar | 63 | 10 | 0 | 39 | 7 | 1 | 35 | 1 | 1 |
| 29 | Koppal | 10 | 0 | 0 | 12 | 0 | 0 | 12 | 0 | 0 |
| 30 | Mandya | 39 | 17 | 0 | 57 | 21 | 0 | 51 | 7 | 0 |
| 31 | Mangaluru City | 713 | 418 | 0 | 1114 | 593 | 0 | 406 | 83 | 1 |
| 32 | Mysuru City | 62 | 2 | 0 | 43 | 0 | 0 | 177 | 0 | 0 |
| 33 | Mysuru Dist | 24 | 5 | 0 | 27 | 6 | 0 | 24 | 2 | 0 |
| 34 | Raichur | 17 | 0 | 0 | 20 | 1 | 6 | 52 | 0 | 11 |
| 35 | Shivamogga | 253 | 152 | 0 | 380 | 206 | 1 | 315 | 44 | 0 |
| 36 | Tumakuru | 80 | 21 | 0 | 111 | 21 | 0 | 157 | 9 | 1 |
| 37 | Udupi | 272 | 232 | 0 | 123 | 82 | 0 | 91 | 17 | 0 |
| 38 | Uttara Kannada | 101 | 71 | 8 | 86 | 39 | 7 | 113 | 28 | 10 |
| 39 | Vijayanagara | 27 | 2 | 0 | 68 | 20 | 0 | 41 | 12 | 2 |
| 40 | Vijayapur | 29 | 0 | 0 | 28 | 5 | 0 | 25 | 3 | 0 |
| 41 | Yadgir | 11 | 0 | 0 | 7 | 0 | 0 | 5 | 0 | 0 |
| | **Total** | **6767** | **3275** | **32** | **4188** | **1577** | **92** | **3530** | **452** | **66** |

## ಅನುಬಂಧ-1

## ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಿಸಿರುವ ಜಿಲ್ಲಾವಾರು ಮಾಹಿತಿ

| Sl. No. | Unit Name | 2023 | | | 2024 | | | 2025 | | |
|---|---|---|---|---|---|---|---|---|---|---|
| | | Rep | Convicted | Acquittal | Rep | Convicted | Acquittal | Rep | Convicted | Acquittal |
| 1 | Bagalkot | 17 | 5 | 0 | 18 | 2 | 0 | 39 | 3 | 3 |
| 2 | Ballari | 54 | 8 | 1 | 29 | 1 | 3 | 20 | 0 | 3 |
| 3 | Belagavi City | 23 | 0 | 1 | 55 | 2 | 3 | 97 | 1 | 3 |
| 4 | Belagavi Dist | 59 | 6 | 1 | 50 | 10 | 25 | 48 | 1 | 6 |
| 5 | Bengaluru City | 3495 | 1760 | 1 | 520 | 5 | 0 | 405 | 4 | 2 |
| 6 | Bengaluru South | 222 | 48 | 0 | 62 | 8 | 0 | 117 | 21 | 0 |
| 7 | Bengaluru Dist | 97 | 43 | 0 | 38 | 7 | 0 | 46 | 6 | 0 |
| 8 | Bidar | 32 | 0 | 15 | 24 | 0 | 18 | 19 | 0 | 12 |
| 9 | Chamarajanagar | 38 | 10 | 0 | 37 | 3 | 0 | 39 | 1 | 0 |
| 10 | Chickballapura | 33 | 3 | 0 | 26 | 6 | 1 | 29 | 6 | 1 |
| 11 | Chikkamagaluru | 222 | 165 | 1 | 227 | 150 | 2 | 143 | 40 | 0 |
| 12 | Chitradurga | 71 | 32 | 2 | 66 | 37 | 8 | 66 | 15 | 0 |
| 14 | Coastal Security Police | 1 | 1 | 0 | 23 | 19 | 0 | 7 | 2 | 0 |
| 15 | Dakshina Kannada | 66 | 39 | 0 | 44 | 23 | 0 | 10 | 1 | 0 |
| 16 | Davanagere | 90 | 55 | 0 | 173 | 115 | 0 | 188 | 58 | 0 |
| 17 | Dharwad | 18 | 2 | 0 | 19 | 3 | 0 | 21 | 0 | 0 |
| 18 | Gadag | 21 | 3 | 0 | 23 | 7 | 3 | 26 | 6 | 1 |
| 19 | Hassan | 80 | 48 | 0 | 130 | 59 | 0 | 64 | 6 | 0 |
| 20 | Haveri | 20 | 6 | 0 | 19 | 8 | 2 | 11 | 1 | 1 |
| 21 | Hubballi Dharwad City | 87 | 15 | 0 | 244 | 48 | 0 | 168 | 2 | 0 |
| 23 | K.G.F | 55 | 31 | 0 | 26 | 7 | 1 | 25 | 8 | 4 |
| 24 | Kalaburagi | 56 | 19 | 2 | 22 | 2 | 11 | 14 | 1 | 3 |
| 25 | Kalaburagi City | 51 | 7 | 0 | 53 | 14 | 0 | 285 | 61 | 1 |
| 26 | Karnataka Railways | 57 | 1 | 0 | 59 | 0 | 0 | 46 | 0 | 0 |
| 27 | Kodagu | 101 | 38 | 0 | 86 | 40 | 0 | 93 | 2 | 0 |
| 28 | Kolar | 63 | 10 | 0 | 39 | 7 | 1 | 35 | 1 | 1 |
| 29 | Koppal | 10 | 0 | 0 | 12 | 0 | 0 | 12 | 0 | 0 |
| 30 | Mandya | 39 | 17 | 0 | 57 | 21 | 0 | 51 | 7 | 0 |
| 31 | Mangaluru City | 713 | 418 | 0 | 1114 | 593 | 0 | 406 | 83 | 1 |
| 32 | Mysuru City | 62 | 2 | 0 | 43 | 0 | 0 | 177 | 0 | 0 |
| 33 | Mysuru Dist | 24 | 5 | 0 | 27 | 6 | 0 | 24 | 2 | 0 |
| 34 | Raichur | 17 | 0 | 0 | 20 | 1 | 6 | 52 | 0 | 11 |
| 35 | Shivamogga | 253 | 152 | 0 | 380 | 206 | 1 | 315 | 44 | 0 |
| 36 | Tumakuru | 80 | 21 | 0 | 111 | 21 | 0 | 157 | 9 | 1 |
| 37 | Udupi | 272 | 232 | 0 | 123 | 82 | 0 | 91 | 17 | 0 |
| 38 | Uttara Kannada | 101 | 71 | 8 | 86 | 39 | 7 | 113 | 28 | 10 |
| 39 | Vijayanagara | 27 | 2 | 0 | 68 | 20 | 0 | 41 | 12 | 2 |
| 40 | Vijayapur | 29 | 0 | 0 | 28 | 5 | 0 | 25 | 3 | 0 |
| 41 | Yadgir | 11 | 0 | 0 | 7 | 0 | 0 | 5 | 0 | 0 |
| | **Total** | **6767** | **3275** | **32** | **4188** | **1577** | **92** | **3530** | **452** | **66** |

## ಅನುಬಂಧ-2

## ಖುಲಾಸೆಗೊಂಡ ಪ್ರಕರಣಗಳ ಮಾಹಿತಿ

### ರಾಯಚೂರು ಜಿಲ್ಲೆ

| ಕ್ರ ಸಂ | ಪೊ.ಠಾ.ಹೆಸರು.ಮೊ.ಸಂ.ಕಲಂ | ನ್ಯಾಯಾಲಯದ ಹೆಸರು &ಸಂಖ್ಯೆ | ಖುಲಾಸೆ/ತೀರ್ಪು ದಿನಾಂಕ | ಖುಲಾಸೆಗೆ ಕಾರಣಗಳು |
|---|---|---|---|---|
| | | **2023** | | |
| 1. | ಜಾಲಹಳ್ಳಿಠಾಣೆಗುನ್ನೆ ನಂ.168/2023 ಕಲಂ: 20(ಎ),(1) ಎನ್.ಡಿ.ಪಿ.ಎಸ್. ಕಾಯ್ದೆ 1985 | ಮಾನ್ಯ ಪ್ರಧಾನ ಮತ್ತು ಜಿಲ್ಲಾ ಸತ್ರ ನ್ಯಾಯಾಲಯ ರಾಯಚೂರು ಸ್ಪೇಷಲ್ ಸಿ ನಂ.903/2023 | 01.07.2025 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. |
| | | **2024** | | |
| 2. | ಸದರ್ ಬಜಾರ್ ಮೊ.ಸಂ-16/2022 ಎನ್.ಡಿ.ಪಿ.ಎಸ್ ಆಕ್ಟ್ | ಜೆ.ಎಮ್.ಎಫ್.ಸಿ 2 ನೇ ನ್ಯಾಯಲಯ, ಸಿ.ಸಿ ನಂ-2707/2022 | 07.02.2024 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. |
| 3. | ಸದರ್ ಬಜಾರ್ ಮೊ.ಸಂ-64/2022 ಎನ್.ಡಿ.ಪಿ.ಎಸ್ ಆಕ್ಟ್ | ಜೆ.ಎಮ್.ಎಫ್.ಸಿ 2 ನೇ ನ್ಯಾಯಲಯ ಸಿ.ಸಿ ನಂ-4197/2022 | 13.11.2024 | ಈ ಪ್ರಕರಣದಲ್ಲಿ ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ |
| 4. | ಸಿಂಧನೂರು ಗ್ರಾಮೀಣ ಗುನ್ನೆ ನಂ:122/2020 ಕಲಂ:20(ಬಿ) ಎನ್.ಡಿ.ಪಿ.ಎಸ್. ಕಾಯ್ದೆ | ಮಾನ್ಯ 2ನೇ ಹೆಚ್ಚುವರಿ ಜೆ.ಎಂ.ಎಫ್.ಸಿ ನ್ಯಾಯಾಲಯ ಸಿಂಧನೂರು | 03.052024 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ |
| 5. | ಗಬ್ಬೂರು 111/2022 ಕಲಂ: 20(ಬಿ) ಎನ್.ಡಿ.ಪಿ.ಎಸ್. ಕಾಯ್ದೆ 1985 | ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ರಾಯಚೂರು ಸ್ಪೇಷಲ್ ಸಿ ನಂ. 1335/2022 | 18.09.2024 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ |
| 6. | ಜಾಲಹಳ್ಳಿ ಠಾಣೆ ಗುನ್ನೆ ನಂ.148/2022 ಕಲಂ: 20(ಬಿ) ಎನ್.ಡಿ.ಪಿ.ಎಸ್. ಕಾಯ್ದೆ 1985 | ಮಾನ್ಯ ಪ್ರಧಾನ ಮತ್ತು ಜಿಲ್ಲಾ ಸತ್ರ ನ್ಯಾಯಾಲಯ ರಾಯಚೂರು ಸ್ಪೇಷಲ್ ಸಿ ನಂ.281/2023 | 16.10.2024 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ |
| 7. | ಗಬ್ಬೂರು 35/2023 ಕಲಂ: 20(ಎ)(1) ಎನ್.ಡಿ.ಪಿ.ಎಸ್. ಕಾಯ್ದೆ 1985 | ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ರಾಯಚೂರು ಸ್ಪೇಷಲ್ ಸಿ ನಂ. 579/2023 | 12.12.2024 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ |
| | | **2025** | | |
| 8. | ಸದರ್ ಬಜಾರ್ ಮೊ.ಸಂ-63/2022 ಎನ್.ಡಿ.ಪಿ.ಎಸ್ ಆಕ್ಟ್ | ಜೆ.ಎಮ್.ಎಫ್.ಸಿ 2 ನೇ ನ್ಯಾಯಲಯ ಸಿ.ಸಿ ನಂ-4240/2022 | 09.04.2025 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ |
| 9. | ಸಿಂಧನೂರು ಗ್ರಾಮೀಣ ಗುನ್ನೆ ನಂ:141/2020 ಕಲಂ:20(ಬಿ) ಎನ್.ಡಿ.ಪಿ.ಎಸ್. ಕಾಯ್ದೆ | ಮಾನ್ಯ 3ನೇ ಹೆಚ್ಚುವರಿ ಜಿಲ್ಲಾ & ಸತ್ರ ನ್ಯಾಯಾಲಯ ರಾಯಚುರು ಪೀಠ ಸಿಂಧನೂರು | 05.08.2025 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ |
| 10. | ಸಿಂಧನೂರು ಗ್ರಾಮೀಣ ಗುನ್ನೆ ನಂ:78/2021 ಕಲಂ:20(ಬಿ) ಎನ್.ಡಿ.ಪಿ.ಎಸ್. ಕಾಯ್ದೆ | ಮಾನ್ಯ 3ನೇ ಹೆಚ್ಚುವರಿ ಜಿಲ್ಲಾ & ಸತ್ರ ನ್ಯಾಯಾಲಯ ರಾಯಚುರು ಪೀಠ ಸಿಂಧನೂರು | 05.02.2025 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ |
| 11. | ಸಿಂಧನೂರು ಗ್ರಾಮೀಣ ಗುನ್ನೆ ನಂ:25/2020ಕಲಂ:20(ಬಿ),(Ii)(A) ಎನ್.ಡಿ.ಪಿ.ಎಸ್. ಕಾಯ್ದೆ | ಮಾನ್ಯ 3ನೇ ಹೆಚ್ಚುವರಿ ಜಿಲ್ಲಾ & ಸತ್ರ ನ್ಯಾಯಾಲಯ ರಾಯಚುರು ಪೀಠ ಸಿಂಧನೂರು | 05.02.2025 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ |
| 12. | ಸಿಂಧನೂರು ಗ್ರಾಮೀಣ ಗುನ್ನೆ ನಂ:125/2022 ಕಲಂ:20(ಬಿ), ಎನ್.ಡಿ.ಪಿ.ಎಸ್. ಕಾಯ್ದೆ | ಮಾನ್ಯ 3ನೇ ಹೆಚ್ಚುವರಿ ಜಿಲ್ಲಾ & ಸತ್ರ ನ್ಯಾಯಾಲಯ ರಾಯಚುರು ಪೀಠ ಸಿಂಧನೂರು | 03.04.2025 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ |
| 13. | ಸಿಂಧನೂರು ಗ್ರಾಮೀಣ ಗುನ್ನೆ ನಂ:126/2020 ಕಲಂ:20(ಎ), ಎನ್.ಡಿ.ಪಿ.ಎಸ್. ಕಾಯ್ದೆ | ಮಾನ್ಯ 3ನೇ ಹೆಚ್ಚುವರಿ ಜಿಲ್ಲಾ & ಸತ್ರ ನ್ಯಾಯಾಲಯ ರಾಯಚುರು ಪೀಠ ಸಿಂಧನೂರು | 10.02.2025 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ |
| 14. | ತುರವಿಹಾಳ ಪೊಲೀಸ್ ಠಾಣೆ ಗುನ್ನೆ | ಮಾನ್ಯ 3 ನೇ ಹೆಚ್ಚುವರಿ ಜಿಲ್ಲಾ & ಸತ್ರ ನ್ಯಾಯಾಲಯ | 10.06.2025 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ |

| | | | | |
|---|---|---|---|---|
| | ನಂ: 135/2020 ಕಲಂ:20(ಎ), ಎನ್.ಡಿ.ಪಿ. ಎಸ್. ಕಾಯ್ದೆ | ರಾಯಚುರು ಪೀಠ ಸಿಂಧನೂರು | | ಪ್ರಕರಣ ಖುಲಾಸೆಗೊಂಡಿತ್ತದೆ |
| 15. | ತುರವಿಹಾಳ ಪೊಲೀಸ್ ಠಾಣೆ ಗುನ್ನೆ ನಂ: 259/2018 ಕಲಂ: 20(ಎ), ಎನ್.ಡಿ.ಪಿ. ಎಸ್. ಕಾಯ್ದೆ | ಮಾನ್ಯ 3 ನೇ ಹೆಚ್ಚುವರಿ ಜಿಲ್ಲಾ & ಸತ್ರ ನ್ಯಾಯಾಲಯ ರಾಯಚುರು ಪೀಠ ಸಿಂಧನೂರು | 04.08.2025 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ |
| 16. | ತುರವಿಹಾಳ ಪೊಲೀಸ್ ಠಾಣೆ ಗುನ್ನೆ ನಂ: 154/2020 ಕಲಂ: 20(ಎ), ಎನ್.ಡಿ.ಪಿ. ಎಸ್. ಕಾಯ್ದೆ | ಮಾನ್ಯ 3 ನೇ ಹೆಚ್ಚುವರಿ ಜಿಲ್ಲಾ & ಸತ್ರ ನ್ಯಾಯಾಲಯ ರಾಯಚುರು ಪೀಠ ಸಿಂಧನೂರು | 07.01.2025 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ |
| 17. | ತುರವಿಹಾಳ ಪೊಲೀಸ್ ಠಾಣೆ ಗುನ್ನೆ ನಂ: 155/2020 ಕಲಂ: 20(ಎ), ಎನ್.ಡಿ.ಪಿ. ಎಸ್. ಕಾಯ್ದೆ | ಮಾನ್ಯ 3 ನೇ ಹೆಚ್ಚುವರಿ ಜಿಲ್ಲಾ & ಸತ್ರ ನ್ಯಾಯಾಲಯ ರಾಯಚುರು ಪೀಠ ಸಿಂಧನೂರು | 02.03.2025 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ |
| 18. | ಸಿ.ಇ.ಎನ್ ಅಪರಾಧ ಪೊಲೀಸ್ ಠಾಣೆ ಮೊ.ಸಂ.07/2023 ಕಲಂ:U/S 20(B) NDPS Act 1985 | ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯ ರಾಯಚೂರು | 01-02-2025 | ಪ್ರತಿಕೂಲ ಸಾಕ್ಷಿ ನುಡಿದ್ದಿದ್ದರಿಂದ ಪ್ರಕರಣ ಖುಲಾಸೆಗೊಂಡಿತ್ತದೆ' |

**ಕೆ.ಜಿ.ಎಫ್**

| ಕ್ರ. ಸಂ | ಪೊ.ಠಾ.ಹೆಸರು ಮೊ.ಸಂ. ಕಲಂ | ನ್ಯಾಯಾಲಯದ ಹೆಸರು ಮತ್ತು ಸಂಖ್ಯೆ | ಖುಲಾಸೆ/ ತೀರ್ಪು ದಿನಾಂಕ | ಖುಲಾಸೆಗೆ ಕಾರಣಗಳು |
|---|---|---|---|---|
| 1. | ಅಂಡ್ರುಸನ್ ಪೇಟೆ 15/2023 ಕಲಂ 20(b) (ii) A ಎನ್.ಡಿ.ಪಿ.ಎಸ್. ಆಕ್ಟ್ | ಪ್ರಿನ್ಸಿ ಫಲ್ ಸಿವಿಲ್ ನ್ಯಾಯಾಧೀಶರು ಮತ್ತು ಅಡಿಷಿನಲ್ ಜೆ.ಎಂ.ಎಫ್.ಸಿ. ಕೆ.ಜಿ.ಎಫ್. | 24.07.2024 | ಸಾಕ್ಷಿದಾರರು ಅಭಿಯೋಜನೆಗೆ ವ್ಯತಿರಿಕ್ತ ಸಾಕ್ಷಿ ನುಡಿದಿರುವುದಿರಿಂದ |
| 2. | ಕಾಮಸಮುದ್ರಂ 96/2023 ಕಲಂ 20(b) (ii) B ಎನ್.ಡಿ.ಪಿ.ಎಸ್. ಆಕ್ಟ್ | ಪ್ರಿನ್ಸಿ ಫಲ್ ಡಿಸ್ಟಿಕ್ & ಸೆಷನ್ಸ್ ಕೋರ್ಟ್, ಕೋಲಾರ | 01.02.2025 | ಸಾಕ್ಷಿದಾರರು ಅಭಿಯೋಜನೆಗೆ ವ್ಯತಿರಿಕ್ತ ಸಾಕ್ಷಿ ನುಡಿದಿರುವುದಿರಿಂದ |
| 3. | ರಾಬರ್ಟಸನ್ ಪೇಟೆ 48/2023 ಕಲಂ 20(b) (ii) A 20(b) (ii) B ಎನ್.ಡಿ.ಪಿ.ಎಸ್. ಆಕ್ಟ್ | ಪ್ರಿನ್ಸಿ ಫಲ್ ಡಿಸ್ಟಿಕ್ & ಸೆಷನ್ಸ್ ಕೋರ್ಟ್, ಕೋಲಾರ | 18.06.2025 | ಸಾಕ್ಷಿದಾರರು ಅಭಿಯೋಜನೆಗೆ ವ್ಯತಿರಿಕ್ತ ಸಾಕ್ಷಿ ನುಡಿದಿರುವುದಿರಿಂದ |
| 4. | ರಾಬರ್ಟಸನ್ ಪೇಟೆ 174/2023 ಕಲಂ 20(b) (ii) B ಎನ್.ಡಿ.ಪಿ.ಎಸ್. ಆಕ್ಟ್ | ಪ್ರಿನ್ಸಿ ಫಲ್ ಡಿಸ್ಟಿಕ್ & ಸೆಷನ್ಸ್ ಕೋರ್ಟ್, ಕೋಲಾರ | 07.04.2025 | ಸಾಕ್ಷಿದಾರರು ಅಭಿಯೋಜನೆಗೆ ವ್ಯತಿರಿಕ್ತ ಸಾಕ್ಷಿ ನುಡಿದಿರುವುದಿರಿಂದ |
| 5. | ರಾಬರ್ಟಸನ್ ಪೇಟೆ 190/2023 ಕಲಂ 20(b) (ii) B ಎನ್.ಡಿ.ಪಿ.ಎಸ್. ಆಕ್ಟ್ | ಪ್ರಿನ್ಸಿ ಫಲ್ ಡಿಸ್ಟಿಕ್ & ಸೆಷನ್ಸ್ ಕೋರ್ಟ್, ಕೋಲಾರ | 07.04.2025 | ಸಾಕ್ಷಿದಾರರು ಅಭಿಯೋಜನೆಗೆ ವ್ಯತಿರಿಕ್ತ ಸಾಕ್ಷಿ ನುಡಿದಿರುವುದಿರಿಂದ |

ಹಾವೇರಿ ಜಿಲ್ಲೆ

| ಕ್ರ. ಸಂ. | ಪೊ.ಠಾ.ಹೆಸರು ಮೊ.ಸಂ. ಕಲಂ | ನ್ಯಾಯಾಲಯದ ಹೆಸರು & ಸಂಖ್ಯೆ | ಖುಲಾಸೆ / ತೀರ್ಪು ದಿನಾಂಕ | ಖುಲಾಸೆಗೆ ಕಾರಣಗಳು |
|---|---|---|---|---|
| 1 | ಗುತ್ತಲ ಪೊಲೀಸ್ ಠಾಣೆ ಅ.ಸಂ 54/2022 ಕಲಂ 20(ಎ), 8ಸಿ ಎನ್‌ಡಿಪಿಎಸ್ ಕಾಯ್ದೆ-1985 | ಹಾವೇರಿ ಜಿಲ್ಲಾ ವ ಸತ್ರ ನ್ಯಾಯಾಲಯ, ಹಾವೇರಿ<br>ಎನ್‌ಡಿಪಿಎಸ್ ನಂ 03/2023 | 02/07/2024 | ಪಂಚ ಸಾಕ್ಷಿದಾರರು ವ್ಯತರಿಕ್ತ ಸಾಕ್ಷ್ಯ ನುಡಿದ ಕಾರಣ ಹಾಗೂ ಸ್ವತಂತ್ರ ಪ್ರತ್ಯಕ್ಷ್ಯದರ್ಶಿ ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯ ನುಡಿದಿರುವ ಕಾರಣ ಬಿಡುಗಡೆ ಆಗಿದೆ. |
| 2 | ಗುತ್ತಲ ಪೊಲೀಸ್ ಠಾಣೆ ಅ.ಸಂ 21/2023 ಕಲಂ 20(ಎ), 8ಸಿ ಎನ್‌ಡಿಪಿಎಸ್ ಕಾಯ್ದೆ-1985 | ಹಾವೇರಿ ಜಿಲ್ಲಾ ವ ಸತ್ರ ನ್ಯಾಯಾಲಯ, ಹಾವೇರಿ<br>ಎನ್‌ಡಿಪಿಎಸ್ ನಂ 05/2023 | 04/10/2024 | ಪಂಚ ಸಾಕ್ಷಿದಾರರು ವ್ಯತರಿಕ್ತ ಸಾಕ್ಷ್ಯ ನುಡಿದಿರುವ ಕಾರಣ ಬಿಡುಗಡೆ ಆಗಿದೆ. |
| 3 | ಹಾವೇರಿ ಸಿಇಎನ್ ಠಾಣೆ ಅ.ಸಂ 67/2023 ಕಲಂ 20(ಬಿ), (2)(ಬಿ) ಎನ್‌ಡಿಪಿಎಸ್ ಕಾಯ್ದೆ-1985 | ಹಾವೇರಿ ಜಿಲ್ಲಾ ವ ಸತ್ರ ನ್ಯಾಯಾಲಯ, ಹಾವೇರಿ<br>ಎನ್‌ಡಿಪಿಎಸ್ ನಂ 07/2023 | 15/07/2025 | ಪಂಚ ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯ ನುಡಿದಿರುವ ಕಾರಣ ಬಿಡುಗಡೆ ಆಗಿದೆ. |

ಬಾಗಲಕೋಟೆ ಜಿಲ್ಲೆ

| ಕ್ರ. ಸಂ. | ಪೋಲೀಸ್ ಠಾಣೆ ಪ್ರ.ಸಂ & ಕಲಂ | ನ್ಯಾಯಾಲಯದ ಹೆಸರು & ಸಂಖ್ಯೆ | ಖುಲಾಸೆ ತೀರ್ಪು ದಿನಾಂಕ | ಖುಲಾಸೆಗೆ ಕಾರಣಗಳು |
|---|---|---|---|---|
| 1 | ಬೀಳಗಿ 06/2022 ಕಲಂ 20(ಎ)(ಬಿ)(1)ಮ20(ಸಿ) ಎನ್‌ಡಿಪಿಎಸ್ ಆಕ್ಟ | ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬಾಗಲಕೋಟೆ ಎಸ್‌ಪಿಎಲ್ ನಂ.20/2022 | 17.07.2025 | ಪಂಚ ಸಾಕ್ಷಿಗಳಲ್ಲಿ ವ್ಯತ್ಯಾಸ ಕಂಡು ಬಂದಿದ್ದರಿಂದ |
| 2. | ತೇರದಾಳ 21/2022 ಕಲಂ 15(ಎ) ಎನ್‌ಡಿಪಿಎಸ್ ಆಕ್ಟ | ಮಾನ್ಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜಮಖಂಡಿ ಎಸ್‌ಪಿಎಲ್ ನಂ. 5023/2023 | 30.06.2025 | ಪಂಚರು ಮತ್ತು ಗೆಜೆಟೆಡ ಅಧಿಕಾರಿಗಳ ಹೇಳಿಕೆಯಲ್ಲಿ ವ್ಯತ್ಯಾಸ ಕಂಡು ಬಂದಿದ್ದರಿಂದ |
| 3. | ಬಾಗಲಕೋಟೆ ಸಿಇಎನ್ 26/2022 ಕಲಂ 20(ಬಿ) ಎನ್‌ಡಿಪಿಎಸ್ ಆಕ್ಟ | ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬಾಗಲಕೋಟೆ ಎಸ್‌ಪಿಎಲ್ ನಂ.04/2022 | 05.05.2025 | ಸಾಕ್ಷಿದಾರ ಹೇಳಿಕೆಯಲ್ಲಿ ವ್ಯತ್ಯಾಸ & ಸಾಕ್ಷಾಧಾರಗಳು ನಿಸ್ಸಂಶೆಯಾಗಿ |

| | | | | |
|---|---|---|---|---|
| | | | | ಸಾಬಿತುಪಡಿಸಲು ವಿಫಲ |

**ಕಲಬುರಗಿ ಜಿಲ್ಲೆಯಲ್ಲಿ**

| ಕ್ರ.ಸಂ | ಪೊಲೀಸ್‌ಠಾಣೆ / ಮೋ ಸಂ/ಕಲಂ | ನ್ಯಾಯಾಲಯ ಹೆಸರು ಹಿ.ಸಿ.ಸಿ /ಎಸ್‌ಸಿ ಸಂಖ್ಯೆ | ಖುಲಾಸೆ /ತೀರ್ಪ ದಿನಾಂಕ | ಖುಲಾಸೆಗೆ ಕಾರಣಗಳು |
|---|---|---|---|---|
| 01 | ನಿಂಬರ್ಗಾ ಠಾಣೆ 05/2022 ಕಲಂ 20(ಎ) (ಬಿ) (ಐ) ಎನ.ಡಿ.ಪಿ.ಎಸ್ ಕಾಯ್ದೆ | ಕಲಬುರಗಿ ಸತ್ರ ನ್ಯಾಯಾಲಯ 01/07/2022 SPL NO. 02/2023 | 04/04/2025 | ಪ್ರತೀಕೂಲ ಸಾಕ್ಷಿ ನುಡಿದಿದ್ದರಿಂದ |
| 02 | ನರೋಣಾ ಪೊಲೀಸ ಠಾಣೆ 92/22 ಕಲಂ. 20(ಎ),(1),20(ಬಿ)(ii)(ಬಿ), 8(ಬಿ) ಎನ್.ಡಿ.ಪಿ.ಎಸ್ ಆಕ್ಟ್-1985 | ಕಲಬುರಗಿ ಸತ್ರ ನ್ಯಾಯಾಲಯ SPL NO. 26/2023. | 02/05/2025 | ಪ್ರತೀಕೂಲ ಸಾಕ್ಷಿ ನುಡಿದಿದ್ದರಿಂದ |
| 03 | ರೇವೂರ ಪೊಲೀಸ್ ಠಾಣೆ ಗುನ್ನೇ ನಂ: 85/2022 ಕಲಂ 20(ಎ),(ಐ) ಎನ್ ಡಿ ಪಿ ಎಸ್ ಆಕ್ಟ | ಜಿಲ್ಲಾ ಸತ್ರ ನ್ಯಾಯಾಲಯ ಕಲಬುರಗಿ & SPL NO: 11/2023 | 02/06/2025 | ಸಿ ಆರ್ ಪಿ ಸಿ 235(1) ರ ಪ್ರಕಾರ ಬಿಡುಗಡೆ ಮಾಡಲಾಗಿದೆ. |
| 04 | ನೆಲೋಗಿ ಪೊಲೀಸ್ ಠಾಣೆ ಗುನ್ನೆ ನಂಬರ 17/2022 ಕಲಂ 20 (ಬಿ), (2) (ಸಿ) ಎನ್.ಡಿ.ಪಿ.ಎಸ್ ಆಕ್ಟ | ಮಾನ್ಯ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಲಯ ಕಲಬುರಗಿ ಎನ್.ಡಿ.ಪಿ.ಎಸ್. ಎಸ್.ಪಿ.ಎಲ್ ನಂ 06/2022 | 06-07-2024 | ಪಂಚರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ |
| 05 | ಯಡ್ರಾಮಿ ಗುನ್ನೆ ನಂ 195/2022 ಕಲಂ 8, 20(ಎ)(1), 20(ಬಿ)(II) ಬಿ ಎನ್‌ಡಿಪಿಎಸ್ ಆಕ್ಟ್ | ಮಾನ್ಯ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ ಕಲಬುರಗಿ, ಎನ್.ಡಿ.ಪಿ.ಎಸ್. ಎಸ್.ಪಿ.ಎಲ್ ನಂ 07/2023 | 12-11-2024 | ಸಾಕ್ಷಿದಾರರು ಅಭಿಯೋಜನೆ ಪರ ಸಾಕ್ಷಿ ನುಡಿದಿರುವುದಿಲ್ಲಾ. |
| 06 | ಯಡ್ರಾಮಿ ಗುನ್ನೆ ನಂ 197/2022 ಕಲಂ 8, 20(ಎ)(1), 20(ಬಿ)(II) ಬಿ ಎನ್‌ಡಿಪಿಎಸ್ ಆಕ್ಟ್ | ಮಾನ್ಯ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ ಕಲಬುರಗಿ, ಎನ್.ಡಿ.ಪಿ.ಎಸ್. ಎಸ್.ಪಿ.ಎಲ್ ನಂ 10/2023 | 05-11-2024 | ಸಾಕ್ಷಿದಾರರು ಅಭಿಯೋಜನೆ ಪರ ಸಾಕ್ಷಿ ನುಡಿದಿರುವುದಿಲ್ಲಾ. |
| 07 | ಕಮಲಾಪೂರ 101/2022 U/s 20(a) (1),20(b) (ii) B NDPS Act | ಮಾನ್ಯ ಜಿಲ್ಲಾ ಸತ್ರ ನ್ಯಾಯಾಲಯ ಕಲಬುರಗಿ ಎಸ್‌ಪಿಎಲ್ ನಂ 08/2023 | 19/10/2024 | ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ |
| 08 | ವಾಡಿ ಪೊಲೀಸ ಠಾಣೆ 41/2022ಕಲಂ 20(ಬಿ)ಎನ್.ಡಿ.ಪಿ.ಎಸ್‌ಕಾ | ಮಾನ್ಯ ಜಿಲ್ಲಾ ಪ್ರಧಾನ ನ್ಯಾಯಾಲಯ ಕಲಬುರಗಿರವರು ಬಿಡುಗಡೆ ಮಾಡಿರುತ್ತಾರೆ. ಎಸ್.ಪಿ ಎಲ್. ನಂ.26/22 | 23/04/2024 | ಸಾಕ್ಷಿಗಳ ಕೊರತೆಯಿಂದಾಗಿ ದೋಷಮುಕ್ತನಾಗಿ ಬಿಡುಗಡೆ ಹೊಂದಿರುತ್ತಾನೆ. |

| | | | | |
|---|---|---|---|---|
| | ಯ್ದೆ | | | |
| 09 | ವಾಡಿ ಠಾಣೆ 15/2022 ಕಲಂ 20(ಬಿ) ಎನ್.ಡಿ.ಪಿ.ಎಸ್ ಆಕ್ಟ್ | 4ನೇ ಜಿಲ್ಲಾ ಸತ್ರ ನ್ಯಾಯಾಲಯ ಕಲಬುರಗಿ ಎಸ್.ಪಿ.ಎಲ್ ನಂ 09/2022 | 03-06-2023 | ಅಭಿಯೋಜಕರ ಪರವಾಗಿ ಸಾಕ್ಷಿ ನುಡಿದ ಕಾರಣ |
| 10 | ವಾಡಿ ಠಾಣೆ 60/2022 ಕಲಂ 20(ಬಿ) ಎನ್.ಡಿ.ಪಿ.ಎಸ್ ಆಕ್ಟ್ | 4ನೇ ಜಿಲ್ಲಾ ಸತ್ರ ನ್ಯಾಯಾಲಯ ಕಲಬುರಗಿ ಎಸ್.ಪಿ.ಎಲ್ ನಂ 12/2023 | 29-06-2024 | ಅಭಿಯೋಜಕರ ಪರವಾಗಿ ಸಾಕ್ಷಿ ನುಡಿದ ಕಾರಣ |
| 11 | ಸುಲೇಪೇಟ ಪೊಲೀಸ್ ಠಾಣೆ ಗುನ್ನೆ ನಂ 04/2022 ಕಲಂ 20 (ಬಿ)(2)(ಬಿ), 20(ಎ)(1 | ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯ ಚಿಂಚೋಳಿ ಸಿ.ಸಿ ನಂ 703/2022 | 03.02.2023 | ಸದರಿ ಪ್ರಕಣದ ಆರೋಪಿ ಮರಣ ಹೊಂದಿದ್ದರಿಂದ ದಿನಾಂಕ 03.02.2023 ರಂದು ಅಬೇಟೆಡ ಎಂದು ಪರಿಗಣಿಸಲಾಗಿದೆ |
| 12 | ವಾಡಿ ಠಾಣೆ ಗುನ್ನೆ ನಂ: 141/2022 20(ಬಿ) ಎನ್‌ಡಿಪಿಎಸ್ ಆಕ್ಟ್ | ಎರಡನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯ ಕಲಬುರಗಿ ಎಸ್‌ಸಿ ನಂ: 26*/2022 | 08-03-2024 | ಪ್ರತಿಕೂಲ ಸಾಕ್ಷಿ |
| 13 | ಡಿಜಿಪೂರ ಪೊಲೀಸ್ ಠಾಣೆ ಗುನ್ನೆ ನಂ: 16/2022 ಕಲಂ 20 (ಎ) (ಬಿ)ಎನ ಡಿ ಪಿ ಎಸ ಆಕ್ಟ್ | ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ ಕಲಬುರಗಿ ಎನ್.ಡಿ.ಪಿ.ಎಸ್. ಎಸ್.ಪಿ.ಎಲ್ ನಂ 31/2022 | 15-11-2024 | ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ |
| 14 | ಕಾಳಗಿ ಠಾಣೆ ಗುನ್ನೆ ನಂ: 15/2022 ಕಲಂ 20(ಬಿ) (ಸಿ) ಎನ್‌ಡಿಪಿಎಸ್ ಆಕ್ಟ್ | ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ ಕಲಬುರಗಿ ಎನ್.ಡಿ.ಪಿ.ಎಸ್.ಎಸ್.ಪಿ.ಎಲ್ ನಂ 09/2022 | 01-04-2024 | ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ |
| 15 | ಕಾಳಗಿ ಠಾಣೆ ಗುನ್ನೆ ನಂ: 60/2022 ಕಲಂ 20(ಬಿ) (2) (ಬಿ) ಎನ್‌ಡಿಪಿಎಸ್ ಆಕ್ಟ | ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ ಕಲಬುರಗಿ ಎನ್.ಡಿ.ಪಿ.ಎಸ್.ಎಸ್.ಪಿ.ಎಲ್ ನಂ 81/2023 | 19-08-2024 | ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ |
| 16 | ಮಳಖೇಡ ಪೊಲೀಸ್ ಠಾಣೆ ಗುನ್ನೆ ನಂ: 57/2023 ಕಲಂ ಕಲಂ 20 (ಎ) (ಬಿ)ಎನ ಡಿ ಪಿ ಎಸ ಆಕ್ಟ | ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ ಕಲಬುರಗಿ ಎನ್.ಡಿ.ಪಿ.ಎಸ್.ಎಸ್.ಪಿ.ಎಲ್ ನಂ 06/2023 | 08-02-2024 | ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ |

ತುಮಕೂರು ಜಿಲ್ಲೆ

| ಕ್ರ. ಸಂ | ಪೊಲೀಸ್‌ಠಾಣೆ ಹೆಸರು, ಮೊ.ನಂ ಮತ್ತುಕಲಂ | ನ್ಯಾಯಾಲಯದ ಹೆಸರು ಮತ್ತು ಸಂಖ್ಯೆ | ಖುಲಾಸೆ/ ತೀರ್ಪು ದಿನಾಂಕ | ಖುಲಾಸೆಗೆ ಕಾರಣಗಳು |
|---|---|---|---|---|
| | | 2023 | | |
| 1. | ಸಿಐಎನ್ ಪೊಲೀಸ್‌ಠಾಣೆ ಮೊ.ನಂ 41/2023 ಕಲಂ 20(ಬಿ) ಎನ್‌ಡಿಪಿಎಸ್ ಆಕ್ಟ್ | ಪ್ರಧಾನಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸ್ಪೆಷಲ್.ಸಿ.ಸಿ 314/2023 | 07/07/2025 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಖುಲಾಸೆಯಾಗಿರುತ್ತದೆ. |

ಶಿವಮೊಗ್ಗ ಜಿಲ್ಲೆ

| ಪೊಲೀಸ್‌ಠಾಣೆಯ ಹೆಸರು ಮೊ. ಸಂ. ಕಲಂ: | ನ್ಯಾಯಾಲಯದ ಹೆಸರು& ಸಂಖ್ಯೆ | ಖುಲಾಸೆ/ ತೀರ್ಪ ದಿನಾಂಕ | ಖುಲಾಸೆಗೆ ಕಾರಣಗಳು |
|---|---|---|---|
| ಹೊಸಮನೆ ಠಾಣೆ ಗುನ್ನೆ ನಂ: 99/2023 ಕಲಂ: 20(b) (ii) A ಎನ್.ಡಿ.ಪಿ.ಎಸ್.ಆಕ್ಟ್ | 3ನೇ ಎ.ಸಿ.ಜೆ & ಜೆ.ಎಂ.ಎಫ್.ಸಿ ಹೊಸಮನೆ | 07–08–2024 | ನ್ಯಾಯಾಲಯದಲ್ಲಿ ಪಂಚನಾಮೆ ಸಾಕ್ಷಿದಾರರುಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಪ್ರಕರಣಖುಲಾಸೆಯಾಗಿರುತ್ತದೆ. |

ಕೋಲಾರ

| ಕ್ರ. ಸಂ | ಪೊಲೀಸ್ ಠಾಣೆ ಹೆಸರು ಮೊ.ಸಂ ಮತ್ತುಕಲಂ | ನ್ಯಾಯಾಲಯದ ಹೆಸರು ಮತ್ತು ಸಂಖ್ಯೆ | ಖುಲಾಸೆ ದಿನಾಂಕ | ಖುಲಾಸೆಗೆ ಕಾರಣಗಳು |
|---|---|---|---|---|
| 1 | ಮುಳಬಾಗಲು ಗ್ರಾಮಾಂತರ 155/2023 U/S 20(B) (II) (B) OF NDPS ACT | ಜಿಲ್ಲಾಸೆಷನ್ಸ್ ನ್ಯಾಯಾಲಯ, 47/2023 | 10-09-2024 | THERE IS DELAY IN PRODUCING GANJA FOR INVENTORY EXAMINATION. THERE IS DELAY IN SENDING SEIZED SAMPLE GANJA FOR FSL EXAMINATION. |
| 2 | ಶ್ರೀನಿವಾಸಪುರ 100/2023 U/S 20(B)(ii) NDPS ACT. | ಜಿಲ್ಲಾಸೆಷನ್ಸ್ ನ್ಯಾಯಾಲಯ, SPL(C) (NDPS) 29/2023 | 18-06-2025 | WITNESSES TURNED HOSTILE. |

ಮಂಗಳೂರು

| | ಕ್ರಸಂ | ಪೊಲೀಸ್ ಠಾಣೆಯ ಹೆಸರು, ಮೊ. ಸಂ, ಕಲಂ | ನ್ಯಾಯಾಲಯದ ಹೆಸರು ಮತ್ತು ಸಂಖ್ಯೆ | ಖುಲಾಸೆ / ತೀರ್ಪು ದಿನಾಂಕ | ಖುಲಾಸೆಗೆ ಕಾರಣಗಳು |
|---|---|---|---|---|---|
| 2022 | 01 | ಕೊಣಾಜೆ ಪೊಲೀಸ್ ಠಾಣಾ ಅ.ಕ್ರ 109/2022 ಕಲಂ 8(C), 20 (b)(ii)(C), 25 NDPS Act | ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಮಂಗಳೂರು ಸ್ಪೆಷಲ್ ಕೇಸ್ ನಂಬ್ರ 200/2023 | ದಿನಾಂಕ : 16–10–2024 | ಪ್ರಕರಣದಲ್ಲಿ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದ್ದರಿಂದ ಸದ್ರಿ ಪ್ರಕರಣವು ಖುಲಾಸೆಗೊಂಡಿರುತ್ತದೆ. ತನಿಖೆಯಲ್ಲಿ ಯಾವುದೇ ಲೋಪದೋಷವಾಗಿರುವುದಿಲ್ಲ. |

ಬೆಳಗಾವಿ ನಗರ

| ಕ್ರ ಸಂ | ಮೊ.ತಾ ಹೆಸರು ಮೊ.ಸಂ ಕಲಂ | ನ್ಯಾಯಾಲಯದ ಹೆಸರು & ಸಂಖ್ಯೆ | ಖುಲಾಸೆ/ತೀರ್ಮ ದಿನಾಂಕ | ಖುಲಾಸೆಗೆ ಕಾರಣಗಳು |
|---|---|---|---|---|
| 2023 | | | | |
| 1 | ಎಪಿಎಂಸಿ ಠಾಣೆ ಗುನ್ನಾ ನಂಃ 30/23 ಕಲಂ: 21(b) ಎನ್‌ಡಿಪಿಎಸ್ ಕಾಯ್ದೆ -1985 | 2 ನೇ ಅಧಿಕ ಜಿಲ್ಲಾ ಸತ್ರ ನ್ಯಾಯಾಲಯ ಬೆಳಗಾವಿ ಎಸ್‌ಪಿಎಲ್‌ನಂಃ 595/2023 | 01/03/2024 | ಪಂಚರು ಅಭಿಯೋಜನೆಗೆ ಪರವಾಗಿ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |
| 2 | ಸಿಇಎನ್ ಠಾಣೆ ಅ ಸಂ: 34/23 ಕಲಂ: 21(b) ಎನ್‌ಡಿಪಿಎಸ್ ಕಾಯ್ದೆ -1985 | 2 ನೇ ಅಧಿಕ ಜಿಲ್ಲಾ ಸತ್ರ ನ್ಯಾಯಾಲ ಯ ಬೆಳಗಾವಿ. ಎಸ್.ಸಿ ನಂ 265/2022. | 18-01-2024. | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |
| 3 | ಸಿಇಎನ್ ಠಾಣೆ ಅ ಸಂ: 53/23 ಕಲಂ: 20(b) (ii) ಃ ಎನ್‌ಡಿಪಿಎಸ್ ಕಾಯ್ದೆ -1985 | 2 ನೇ ಅಧಿಕ ಜಿಲ್ಲಾ ಸತ್ರ ನ್ಯಾಯಾಲ ಯ ಬೆಳಗಾವಿ. ಎಸ್.ಸಿ ನಂ 265/2022. | 08-02-2024. | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |
| 4 | ಸಿಇಎನ್ ಠಾಣೆ ಅ ಸಂ: 99/23 ಕಲಂ: 20(b) (ii) B ಎನ್‌ಡಿಪಿಎಸ್ ಕಾಯ್ದೆ -1985 | 2ನೇ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಲಯ ಬೆಳಗಾವಿ ಎಸ್.ಪಿ.ಎಲ್ ನಂ.431/2024 | 24-09-2024. | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |
| 5 | ಖಡೇಬಜಾರ ಅ ಸಂ:19/23 ಕಲಂ 21(b) ಎನ್‌ಡಿಪಿಎಸ್ ಕಾಯ್ದೆ - 1985 | 2ನೇ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಲಯ ಬೆಳಗಾವಿ ಎಸ್.ಪಿ.ಎಲ್ ನಂ. 351/2023 | 11/02/2023 | ಸದರಿ ಪ್ರಕರಣದಲ್ಲಿ ಸಾಕ್ಷಿದಾರರು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |
| 6 | ಮಾಳಮಾರುತಿ ಠಾಣೆ ಅಸಂ: 27/23 ಕಲಂ: 21(b) ಎನ್‌ಡಿಪಿಎಸ್ ಕಾಯ್ದೆ -1985 | 2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬೆಳಗಾವಿ ಸ್ಪೇಷಲ್ ಕೇಸ್ ನಂ :517/2023 | 19/04/2024 | ಪಂಚರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |
| 7 | ಮಾಳಮಾರುತಿ ಠಾಣೆ ಅಸಂ: 45/23 ಕಲಂ: 20(b),20(ii) B | 2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬೆಳಗಾವಿ | 16/03/2024 | ಪಂಚರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |

| | | | | |
|---|---|---|---|---|
| | ಎನ್‌ಡಿಪಿಎಸ್ ಕಾಯ್ದೆ -1985 | ಸ್ಪೇಷಲ್ ಕೇಸ್ ನಂ 518/2022 | | |
| 8 | ಶಹಾಪೂರ ಠಾಣೆ ಅಸಂ: 93/23 ಕಲಂ: 20(a) (i) (B) 20(b) (ii) A ಎನ್‌ಡಿಪಿಎಸ್ ಕಾಯ್ದೆ -1985 | 2 ನೇ ಅಧಿಕ ಜಿಲ್ಲಾ ಸತ್ರ ನ್ಯಾಯಾಲಯ ಬೆಳಗಾವಿ ಎಸ್‌ಪಿಎಲ್‌ನಂ: 666/23 | 03/05/2024 | ಅಭಿಯೋಜನೆಪರ ಪಂಚರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |
| 2024 | | | | |
| 1 | ಸಿಇಎನ್ ಠಾಣೆ ಅ ಸಂ: 22/24 ಕಲಂ: 21(b) ಎನ್‌ಡಿಪಿಎಸ್ ಕಾಯ್ದೆ -1985 | 2 ನೇ ಅಧಿಕ ಜಿಲ್ಲಾ ಸತ್ರ ನ್ಯಾಯಾಲಯ ಬೆಳಗಾವಿ ಎಸ್‌ಪಿಎಲ್‌ನಂ: 312/2024 | 21-09-2024. | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆ ಯಾಗಿರುತ್ತದೆ |
| 2 | ಸಿಇಎನ್ ಠಾಣೆ ಅ ಸಂ: 23/24 ಕಲಂ: 21(b) ಎನ್‌ಡಿಪಿಎಸ್ ಕಾಯ್ದೆ -1985 | 2 ನೇ ಅಧಿಕ ಜಿಲ್ಲಾ ಸತ್ರ ನ್ಯಾಯಾಲಯ ಬೆಳಗಾವಿ ಎಸ್‌ಪಿಎಲ್‌ನಂ: 222/2024 | 03-07-2024. | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |
| 3 | ಕ್ಯಾಂಪ್ ಠಾಣೆ ಅಸಂ: 72/24 ಕಲಂ: 20(b) (ii) (B) ಎನ್‌ಡಿಪಿಎಸ್ ಕಾಯ್ದೆ -1985 | 2 ನೇ ಅಧಿಕ ಜಿಲ್ಲಾ ಸತ್ರ ನ್ಯಾಯಾಲ ಯ ಬೆಳಗಾವಿ. ಎಸ್.ಸಿ ನಂ.695/2024 | 16/01/2025 | ಸಾಕ್ಷಿದಾರರು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |
| 4 | ಮಾಳಮಾರುತಿ ಠಾಣೆ ಅಸಂ: 212/24 ಕಲಂ: 21(b) ಎನ್‌ಡಿಪಿಎಸ್ ಕಾಯ್ದೆ -1985 | 2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬೆಳಗಾವಿ ಸ್ಪೇಷಲ್ ಕೇಸ್ ನಂ :25/2025 | 27/02/2025 | ಪಂಚರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |
| 5 | ಮಾರಿಹಾಳ ಠಾಣೆ ಅ ಸಂ: 31/2024 ಕಲಂ: 20(b) (ii) (B) ಎನ್‌ಡಿಪಿಎಸ್ ಕಾಯ್ದೆ -1985 | ಜೆಎಂಎಫ್‌ಸಿ 3ನೇ ನ್ಯಾಯಾಲಯ ಬೆಳಗಾವಿ ಎಸ್‌ಪಿಎಲ್ ನಂ: 38/24 | 17/09/2024 | ಪಂಚರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |
| 6 | ತಿಲಕವಾಡಿ ಠಾಣೆ ಅ ಸಂ: 36/24 ಕಲಂ: 21(b) ಎನ್‌ಡಿಪಿಎಸ್ ಕಾಯ್ದೆ -1985 | 2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬೆಳಗಾವಿ ಸ್ಪೇಷಲ್ ಕೇಸ್ ನಂ : 623/2024 | 07/12/2024 | ಪಂಚರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |
| 7 | ತಿಲಕವಾಡಿ ಠಾಣೆ ಅ ಸಂ: 94/24 ಕಲಂ: 21(b) ಎನ್‌ಡಿಪಿಎಸ್ ಕಾಯ್ದೆ -1985 | 2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬೆಳಗಾವಿ ಸ್ಪೇಷಲ್ ಕೇಸ್ ನಂ : 684/2024 | 15/01/2025 | ಪಂಚರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಬಿಡುಗಡೆಯಾಗಿರುತ್ತದೆ |

ಚಿಕ್ಕಬಳ್ಳಾಪುರ ಜಿಲ್ಲೆ

| ಕ್ರ ಸಂ | ಪೊ.ಠಾ.ಹೆಸರು, ಮೊಸಂ. ಕಲಂ | ನ್ಯಾಯಾಲಯದ ಹೆಸರು & ಸಂಖ್ಯೆ | ಖುಲಾಸೆ/ತೀರ್ಮ ದಿನಾಂಕ | ಖುಲಾಸೆಗೆ ಕಾರಣಗಳು |
|---|---|---|---|---|
| | | **2023** | | |
| 01 | ಸಿ.ಇ.ಎನ್ ಪೊಲೀಸ್ ಠಾಣೆ ಮೊಸಂ; 03/2022 ಕಲಂ: 20(b),20(b)(ii)A ಎನ್.ಡಿ.ಪಿ.ಎಸ್.ಆಕ್ಟ್. | ಫಸ 2 ನೇ ಹೆಚ್ಚುವರಿ ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಚಿಕ್ಕಬಳ್ಳಾಪುರ ನಗರ | 02-04-2025 | ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. |
| 02 | ಸಿ.ಇ.ಎನ್ ಪೊಲೀಸ್ ಠಾಣೆ ಮೊಸಂ; 97/2023 ಕಲಂ: 20(b) ಎನ್.ಡಿ.ಪಿ.ಎಸ್.ಆಕ್ಟ್. | ಫಸ 2 ನೇ ಹೆಚ್ಚುವರಿ ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಚಿಕ್ಕಬಳ್ಳಾಪುರ ನಗರ | 19-10-2024 | ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. |

**ಚಿತ್ರದುರ್ಗ ಜಿಲ್ಲೆ**

| ಕ್ರ.ಸಂ. | ಪೊಲೀಸ್ ಠಾಣೆಯ ಹೆಸರು, ಮೊ.ಸಂ. ಕಲಂ | ನ್ಯಾಯಾಲಯದ ಹೆಸರು & ಸಂಖ್ಯೆ | ಖುಲಾಸೆ / ತೀರ್ಮ ದಿನಾಂಕ | ಖುಲಾಸೆಗೆ ಕಾರಣಗಳು |
|---|---|---|---|---|
| | | 2023 | | |
| 01 | ಹೊಸದುರ್ಗ ಪೊಲೀಸ್ ಠಾಣೆ ಮೊ.ಸಂ.479/2018 ಕಲಂ 20(ಬಿ) ಎನ್.ಡಿ.ಪಿ.ಎಸ್. ಆಕ್ಟ್–1985 | ಪಿ.ಸಿ.ಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸದುರ್ಗ. ಎಸ್.ಪಿ.ಎಲ್. ಸಿ. ನಂಬರ್ 05/2021 | 11–07–2023 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಖುಲಾಸೆಯಾಗಿರುತ್ತದೆ. |
| 02 | ಹೊಳಲ್ಕೆರೆ ಪೊಲೀಸ್ ಠಾಣೆ ಮೊ.ಸಂ.237/2021 ಕಲಂ 20(ಬಿ) ಎನ್.ಡಿ.ಪಿ.ಎಸ್. ಆಕ್ಟ್–1985 | ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ. ಎಸ್.ಪಿ.ಎಲ್. ಸಿ. ನಂಬರ್ 08/2021 | 27–09–2023 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಖುಲಾಸೆಯಾಗಿರುತ್ತದೆ. |
| | | 2024 | | |
| 01 | ಸಿ.ಇ.ಎನ್. ಅಪರಾಧ ಪೊಲೀಸ್ ಠಾಣೆ ಮೊ.ಸಂ.24/2020 ಕಲಂ 20(ಬಿ)(1)(ಸಿ) ಎನ್.ಡಿ.ಪಿ.ಎಸ್. ಆಕ್ಟ್–1985 | ಪಿ.ಎಸ್.ಸಿ.ಜೆ. & ಸಿ.ಜೆ.ಎಂ. ನ್ಯಾಯಾಲಯ, ಚಿತ್ರದುರ್ಗ. ಸಿಸಿ ನಂಬರ್ 67/2021 | 13–02–2024 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಖುಲಾಸೆಯಾಗಿರುತ್ತದೆ. |
| 02 | ಕೋಟೆ ಪೊಲೀಸ್ ಠಾಣೆ ಮೊ.ಸಂ.13/2018 ಕಲಂ 20(1)(ಬಿ) ಎನ್.ಡಿ.ಪಿ.ಎಸ್. ಆಕ್ಟ್–1985 | ಪಿ.ಎಸ್.ಸಿ.ಜೆ. & ಸಿ.ಜೆ.ಎಂ. ನ್ಯಾಯಾಲಯ, ಚಿತ್ರದುರ್ಗ. ಸಿಸಿ ನಂಬರ್ 909/2019 | 15–03–2024 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಖುಲಾಸೆಯಾಗಿರುತ್ತದೆ. |
| 03 | ಕೋಟೆ ಪೊಲೀಸ್ ಠಾಣೆ ಮೊ.ಸಂ.47/2017 ಕಲಂ | ಪಿ.ಎಸ್.ಸಿ.ಜೆ. & ಸಿ.ಜೆ.ಎಂ. ನ್ಯಾಯಾಲಯ, ಚಿತ್ರದುರ್ಗ. | 26–03–2024 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ |

| | | | | |
|---|---|---|---|---|
| | 20(ಎ)(1) ಎನ್.ಡಿ.ಪಿ.ಎಸ್. ಆಕ್ಟ್–1985 | ಸಿಸಿ ನಂಬರ್ 1244/2018 | | ಖುಲಾಸೆಯಾಗಿರುತ್ತದೆ. |
| 04 | ಸಿ.ಇ.ಎನ್. ಅಪರಾಧ ಪೊಲೀಸ್ ಠಾಣೆ ಮೊ.ಸಂ.06/2021 ಕಲಂ 20(ಬಿ)(1) ಎನ್.ಡಿ.ಪಿ.ಎಸ್. ಆಕ್ಟ್–1985 | ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ. ಎಸ್.ಪಿ.ಎಲ್. ಸಿ. ನಂಬರ್ 06/2021 | 26–06–2024 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಖುಲಾಸೆಯಾಗಿರುತ್ತದೆ. |
| 05 | ಕೋಟೆ ಪೊಲೀಸ್ ಠಾಣೆ ಮೊ.ಸಂ.138/2019 ಕಲಂ 20(ಬಿ)(1) ಎನ್.ಡಿ.ಪಿ.ಎಸ್. ಆಕ್ಟ್–1985 | ಪಿ.ಎಸ್.ಸಿ.ಜೆ. & ಸಿ.ಜೆ.ಎಂ. ನ್ಯಾಯಾಲಯ, ಚಿತ್ರದುರ್ಗ. ಸಿಸಿ ನಂಬರ್ 1696/2020 | 29–08–2024 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಖುಲಾಸೆಯಾಗಿರುತ್ತದೆ. |
| 06 | ಹೊಳಲ್ಕೆರೆ ಪೊಲೀಸ್ ಠಾಣೆ ಮೊ.ಸಂ.491/2013 ಕಲಂ 20(ಬಿ)(1) ಎನ್.ಡಿ.ಪಿ.ಎಸ್. ಆಕ್ಟ್–1985 | ಪಿ.ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಳಲ್ಕೆರೆ. ಸಿಸಿ ನಂಬರ್ 956/2020 | 10–09–2024 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಖುಲಾಸೆಯಾಗಿರುತ್ತದೆ. |
| 07 | ಮೊಳಕಾಲ್ಮೂರು ಪೊಲೀಸ್ ಠಾಣೆ ಮೊ.ಸಂ.28/2015 ಕಲಂ 20(ಬಿ) ಎನ್.ಡಿ.ಪಿ.ಎಸ್. ಆಕ್ಟ್–1985 | ಪಿ.ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ, ಮೊಳಕಾಲ್ಮೂರು. ಸಿಸಿ ನಂಬರ್ 507/2015 | 28–11–2024 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಖುಲಾಸೆಯಾಗಿರುತ್ತದೆ. |
| 08 | ರಾಂಪುರ ಪೊಲೀಸ್ ಠಾಣೆ ಮೊ.ಸಂ.39/2020 ಕಲಂ 21(ii)(ಬಿ) ಎನ್.ಡಿ.ಪಿ.ಎಸ್. ಆಕ್ಟ್–1985 | ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ. ಎಸ್.ಪಿ.ಎಲ್. ಸಿ. ನಂಬರ್ 06/2020 | 10–12–2024 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಖುಲಾಸೆಯಾಗಿರುತ್ತದೆ. |
| | | **2025** | | |
| 01 | ಚಿತ್ರದುರ್ಗ ನಗರ ಪೊಲೀಸ್ ಠಾಣೆ ಮೊ.ಸಂ.109/2019 ಕಲಂ 21(ಬಿ) ಎನ್.ಡಿ.ಪಿ.ಎಸ್. ಆಕ್ಟ್–1985 | ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ. ಎಸ್.ಪಿ.ಎಲ್. ಸಿ. ನಂಬರ್ 08/2020 | 17–06–2025 | ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಖುಲಾಸೆಯಾಗಿರುತ್ತದೆ. |

****

## ಅನುಬಂಧ-3

## ನ್ಯಾಯಾಲಯಕ್ಕೆ ಪೂರಕ ದಾಖಲೆಗಳನ್ನು ಒದಗಿಸದೆ ಪ್ರಕರಣಗಳ ಖುಲಾಸೆಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳ ಮಾಹಿತಿ

ಬೆಳಗಾವಿ ಜಿಲ್ಲೆ

| ಕ್ರ. ಸಂ | ನ್ಯಾಯಾಲಯಕ್ಕೆ ಪೂರಕ ದಾಖಲೆಗಳನ್ನು ಒದಗಿಸದೆ ಪ್ರಕರಣಗಳ ಖುಲಾಸೆಗೆ ಸಹಕರಿಸುತ್ತಿರುವ ಅಧಿಕಾರಿಗಳ ವಿವರಗಳು | ಖುಲಾಸೆಗೊಂಡ ಪ್ರಕರಣದ ವಿವರಗಳು | ಅಧಿಕಾರಿಯ ವಿರುದ್ಧ ಕೈಗೊಂಡ ಕ್ರಮಗಳ ವಿವರಗಳು |
|---|---|---|---|
| 1. | 1. ಎಫ್. ವೈ. ಮಲ್ಲೂರ, ಪಿಎಸ್ಐ<br>2. ಯು. ಎಚ್. ಸಾತೇನಹಳ್ಳಿ, ಪಿಐ<br>3. ಪ್ರವೀಣ ಕೋಟಿ ಪಿಎಸ್ಐ | ಬೈಲಹೊಂಗಲ ಪಿಎಸ್, ಬೆಳಗಾವಿ ಜಿಲ್ಲೆ ಗುನ್ನಾ ನಂ: 204/2022 & ಕಲಂ: 20(ಎ)(i), 20(ಬಿ)(ii)(ಎ) ಎನ್‌ಡಿಪಿಎಸ್ ಕಾಯ್ದೆ | 1. ಸದರಿ ಅಧಿಕಾರಿಯ ಮೇಲೆ 03 ತಿಂಗಳು ವಾರ್ಷಿಕ ವೇತನ ಬಡ್ತಿಯ ಮೇಲೆ ಪರಿಣಾಮ ಬೀರದಂತೆ ತಡೆಹಿಡಿದು ಆದೇಶಿಸಲಾಗಿದೆ.<br>2. ಸದರಿ ಅಧಿಕಾರಿಯ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲನೆಯಲ್ಲಿದೆ.<br>3. ಸದರಿ ಅಧಿಕಾರಿಗೆ ವಾಗ್ದಂಡನೆ ವಿಧಿಸಿ ಆದೇಶಿಸಲಾಗಿದೆ |
| 2. | ಬಿ. ವ್ಹಿ. ನ್ಯಾಮಗೌಡ, ಪಿಎಸ್ಐ ಯಮಕನಮರಡಿ ಪಿಎಸ್ | ಯಮಕನ ಮರಡಿ, ಬೆಳಗಾವಿ ಜಿಲ್ಲೆ ಗುನ್ನಾ ನಂ: 116/2022 & ಕಲಂ:20 (ಎ) (i) ಎನ್‌ಡಿಪಿಎಸ್ ಕಾಯ್ದೆ | ಸದರಿ ಅಧಿಕಾರಿಯ ಮೇಲೆ ಶಿಸ್ತು ಕ್ರಮ ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲನೆಯಲ್ಲಿದೆ. |
| 3. | ನಾಗಪ್ಪಾ ಆರ್. ಖಿಲಾರೆ, ಪಿಎಸ್ಐ | ಗೋಕಾಕ ಗ್ರಾಮೀಣ ಪಿಎಸ್, ಬೆಳಗಾವಿ ಜಿಲ್ಲೆ ಗುನ್ನಾ ನಂ: 79/2022 & ಕಲಂ 20 (ಎ), 20 (ಬಿ) ಎನ್.ಡಿ.ಪಿ.ಎಸ್. ಕಾಯೆ-1985 | ಸದರಿ ಅಧಿಕಾರಿಯ ಮೇಲೆ 02 ತಿಂಗಳು ವಾರ್ಷಿಕ ವೇತನ ಬಡ್ತಿಯ ಮೇಲೆ ಪರಿಣಾಮ ಬೀರದಂತೆ ತಡೆಹಿಡಿದು ಆದೇಶಿಸಲಾಗಿದೆ. |
| 4. | ಪ್ರವೀಣ ಗಂಗೋಳ ಪಿಎಸ್ಐ ಕಿತ್ತೂರ ಪೊಲೀಸ್ ಠಾಣೆ | ಕಿತ್ತೂರ 231/2024 ಕಲಂ 20 (ಬಿ) ಎನ್.ಡಿ.ಪಿ.ಎಸ್ ಕಾಯ್ದೆ-1985 | ಸದರಿ ಅಧಿಕಾರಿಯವರಿಗೆ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂಬರುವ ವಾರ್ಷಿಕ ವೇತನ ಬಡ್ತಿ ಮೇಲೆ ಪರಿಣಾಮ ಬೀರದಂತೆ ಮೂರು (3) ತಿಂಗಳಗಳು ಕಾಲ ಮುಂದೂಡಲಾಗಿದೆ. |

ಉತ್ತರ ಕನ್ನಡ ಜಿಲ್ಲೆ

| ಕ್ರ.ಸಂ | ನ್ಯಾಯಾಲಯಕ್ಕೆ ಪೂರಕ ದಾಖಲೆಗಳನ್ನು ಒದಗಿಸದೆ ಪ್ರಕರಣಗಳ ಖುಲಾಸೆಗೆ ಸಹಕರಿಸುತ್ತಿರುವ ಅಧಿಕಾರಿಗಳ ವಿವರಗಳು | ಖುಲಾಸೆಗೊಂಡ ಪ್ರಕರಣದ ವಿವರಗಳು | ಅಧಿಕಾರಿಯ ವಿರುದ್ಧ ಕೈಗೊಂಡ ಕ್ರಮಗಳ ವಿವರಗಳು |
|---|---|---|---|
| 2023 | ಪಿ.ಡ್ಬ್ಲ್ಯೂ-08. ಶ್ರೀ ರಂಗನಾಥ ಜಿ ನೀಲಮ್ಮನವರ ಪಿ..ಐ ಅಂಕೋಲಾ ಹಾಲಿ : ಪಿ.ಐ.ಯಲ್ಲಾಪುರ ಪೊಲೀಸ್‌ಠಾಣೆ | 43/2018 ಕಲಂ: 20(ಬಿ), 8 (ಬಿ)ಎನ್. ಡಿ. ಪಿ. ಎಸ್ ಕಾಯ್ದೆ-1985 ಮತ್ತು ಕಲಂ: 353, 332 ಐ.ಪಿ.ಸಿ ಸಿ ಸಿ ನಂ 404/2020 | ಸದರಿಯವರ ಮುಂದಿನ ವಾ.ವೇ ಬಡ್ತಿಯನ್ನುತದ ನಂತರ ಗಳಿಸುವ ವಾ.ವೇ ಬಡ್ತಿಗಳ ಮೇಲೆ 01 ತಿಂಗಳ ಕಾಲ ಮುಂದೂಡಿ ಆದೇಶಿಸಲಾಗಿದೆ |
| 2025 (ಜುಲೈ-31ರ ಅಂತ್ಯಕ್ಕೆ) | 1) ಶ್ರೀ ಗೋವಿಂದ ಬಿಎಮ್. ಪಿ.ಎಸ್.ಐ. ಗೋಕರ್ಣ ಪೊಲೀಸ್‌ಠಾಣೆ ಹಾಲಿ: ಪಿ.ಐ ಅನಗನಗೊಂಡನಹಳ್ಳಿ ಹೊಸಕೋಟೆ ಬೆಂಗಳೂರು ಗ್ರಾಮಾಂತರ ಪೊಲೀಸ್‌ಠಾಣೆ<br>2) ಶ್ರೀ ಸಂತೋಷಕುಮಾರ ಅಂಜನಪ್ಪ ಪಿ.ಎಸ್.ಐ. ಗೋಕರ್ಣ ಪೊಲೀಸ್ ಠಾಣೆ ಹಾಲಿ: ಶಿರಸಿ ಗ್ರಾಮೀಣ ಪೊಲೀಸ ಠಾಣೆ | ಗುನ್ನಾ ನಂ. ನಂ 24/2017 ಕಲಂ ಕಲಂ 20(ಬಿ) (II) (ಎ) ಎನ್.ಡಿ.ಪಿ.ಎಸ್‌ಕಾಯಿದೆ (ಸಿ.ಸಿ ನಂ 120/2019) | ಸದರಿ ತನಿಖಾಧಿಕಾರಿಗಳಿಗೆ ಕಾರಣ ಕೇಳುವ ನೋಟಿಸ್ ನೀಡಲಾಗಿದೆ. |

ಬಳ್ಳಾರಿ ಜಿಲ್ಲೆ

| ಕ್ರ ಸಂ | ನ್ಯಾಯಾಲಯಕ್ಕೆ ಪೂರಕ ದಾಖಲೆಗಳನ್ನು ಒದಗಿಸದೆ ಪ್ರಕರಣಗಳ ಖುಲಾಸೆಗೆ ಸಹಕರಿಸುತ್ತಿರುವ ಅಧಿಕಾರಿಗಳ ವಿವರಗಳು | ಖುಲಾಸೆಗೊಂಡ ಪ್ರಕರಣದ ವಿವರಗಳು | ಅಧಿಕಾರಿಯ ವಿರುದ್ಧ ಕೈಗೊಂಡ ಕ್ರಮಗಳ ವಿವರಗಳು |
|---|---|---|---|
| | | 2023 | |
| 01 | ಶ್ರೀ ಎನ್.ಲೋಕರಾಜ್, ನಿವೃತ್ತ ಪಿಎಸ್‌ಐ | ಶ್ರೀ ಹಸನ್‌ಸಾಬ್ ಪಿ.ಐ ಡಿ.ಎಸ್‌ಬಿ (ಪ್ರಾ.ಸ-1), ಶ್ರೀ ಟಿ.ವಿ.ಸುರೇಶ್, ಡಿ.ಎಸ್.ಪಿ(ಪ್ರಾ.ಸ-2)ರವರಿಗೆ ನೀಡಿದ ಮನವಿ ಪತ್ರ ಮತ್ತು ಶ್ರೀ ಟಿ.ವಿ.ಸುರೇಶ್., ಡಿ.ಎಸ್ .ಪಿ(ಪ್ರಾ.ಸ-2)ರವರು ಆರೋಪಿತರಿಗೆ ನೀಡಿದ ಮನೆ ಶೋಧನ ಒಪ್ಪಿಗೆ ಪತ್ರಗಳನ್ನು ದೋಷಾರೋಪಣೆ ಪತ್ರದೊಂದಿಗೆ ಲಗತ್ತಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸದೇ ಇರುವುದರಿಂದ ಮಾನ್ಯ ನ್ಯಾಯಾಲಯವು ಖುಲಾಸೆಗೊಳಿಸಿರುತ್ತದೆ. | ಕ್ರಮ ಕೈಗೊಳ್ಳಲಾಗುತ್ತಿದೆ. |

| | | | |
|---|---|---|---|
| 2024 | | | |
| 01 | ಆರ್.ಸುರೇಶಪ್ಪ, ಪಿಎಸ್ಐ, ಎಪಿಎಂಸಿ ಪೊಲೀಸ್ ಠಾಣೆ | ಪ್ರಾ.ಸಾ:01 ರವರು ಆರೋಪಿತರಿಗೆ ಅವರ ಹಕ್ಕುಗಳ ಬಗ್ಗೆ ತಿಳಿಸಿದ ಬಗ್ಗೆ ಯಾವುದೇ ಲಿಖಿತವಾದ ನೋಟೀಸ್‌ನ್ನು ಮತ್ತು ಆರೋಪಿತರು ಲಿಖಿತವಾಗಿ ಪ್ರಾ.ಸ.1ರವರಿಗೆ ಬರೆದು ಕೊಟ್ಟಿರುವ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಹಾಗೂ ತನಿಖಾಧಿಕಾರಿಯಾದ ನೀವು ಸ್ಪಷ್ಟವಾಗಿ ಆರೋಪಿತರಿಗೆ ತಿಳಿಯುವಂತೆ ಆತನನ್ನು ಶೋಧಿಸಬೇಕಾದಲ್ಲಿ ಆತನು ಇಚ್ಛೆಪಟ್ಟಲ್ಲಿ ಪತ್ರಾಂಕಿತ ಅಧಿಕಾರಿಯ ಸಮಕ್ಷಮದಲ್ಲಿ ಅಥವಾ ನ್ಯಾಯಾಧೀಶರ ಸಮಕ್ಷಮದಲ್ಲಿ ಶೋಧಿಸಬೇಕೆ ಎಂಬ ಬಗ್ಗೆ ಆರೋಪಿತನಿಗೆ ತಿಳಿಸಿಕೊಡದೇ ಈ ಪ್ರಕರಣದಲ್ಲಿ ಎನ್.ಡಿ.ಪಿಎಸ್., ಕಾಯಿದೆಯ ಕಲಂ 50 ರಡಿಯಲ್ಲಿ ಇರತಕ್ಕಹಂತಹ ನಿಯಮವನ್ನು ಪಾಲಿಸದೇ ಇದ್ದ ಕಾರಣ ಮಾನ್ಯ ನ್ಯಾಯಾಲಯವು ಸದರಿ ಪ್ರಕರಣವನ್ನು ಖುಲಾಸೆಗೊಳಿಸಿರುತ್ತದೆ. | ವಾಗ್ದಂಡನೆ ವಿಧಿಸಿದೆ |
| 02 | ಶ್ರೀ ಮಹೇಶ್ ಗೌಡ, ಸಿಪಿಐ ಸಂಡೂರು ವೃತ್ತ | ತನಿಖಾಧಿಕಾರಿಗಳಾದ ಪಿಡಬ್ಲ್ಯೂ-13ರವರು He has denied for the suggestion that without taking proper investigation and verifying the records, filed the charge sheet in accordance with the allegations made in the FIR. Admittedly, he did not verify about the crops raised in the land shown in Ex.P.15 ಎಂದು ನಮೂದಿಸಿ ಮಾನ್ಯ ನ್ಯಾಯಾಲಯವು ಸದರಿ ಪ್ರಕರಣವನ್ನು ಖುಲಾಸೆಗೊಳಿಸಿರುತ್ತದೆ. | ವಾಗ್ದಂಡನೆ ವಿಧಿಸಿದೆ |
| 2025 | | | |
| 01 | ಶ್ರೀ ಕಾಳಿಂಗ., ಪಿಎಸ್ಐ, ಮೋಕಾ ಪೊಲೀಸ್ ಠಾಣೆ | ತೋರಣಗಲ್ಲು ಪೊಲೀಸ್ ಠಾಣೆ ಗುನ್ನೆ ಸಂ.71/2019 ಕಲಂ 40(ಬಿ) ಎನ್‌ಡಿಪಿಎಸ್ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಳ್ಳಾರಿ ಇವರು ದಿನಾಂಕ:04-09-2024ರಲ್ಲಿ ಅಂತಿಮ ತೀರ್ಪನ್ನು ನೀಡಿದ್ದು, ಸದರಿ ತೀರ್ಪಿನಲ್ಲಿ ತನಿಖಾಧಿಕಾರಿಯವರು ಎನ್.ಡಿ.ಪಿ.ಎಸ್ ಕಾಯ್ದೆ ಕಲಂ 41, 42, & 50ನೇದ್ದನ್ನು ಪಾಲನೆ ಮಾಡಿರುವುದಿಲ್ಲ. ಆರೋಪಿ-2ರನ್ನು ಪತ್ತೆ ಹಚ್ಚಲು ಪ್ರಯತ್ನ ಮಾಡಿರುವುದಿಲ್ಲ. ಗಾಂಜಾವನ್ನು ಎಫ್‌ಎಸ್‌ಎಲ್ ಗೆ 15 ದಿನಗಳ ನಂತರ ಕಳುಹಿಸಿರುತ್ತಾರೆ ಎಂದು ಆದೇಶದಲ್ಲಿ ನಮೂದಿಸಿ ಪ್ರಕರಣವನ್ನು ಖುಲಾಸೆಗೊಳಿಸಿ | ವಾಗ್ದಂಡನೆ ವಿಧಿಸಿದೆ |
| 02 | ಶ್ರೀ ಹಸನ್ ಸಾಬ್, ನಿವೃತ್ತ ಪಿಐ | ಕುಡುತಿನಿ ಪೊಲೀಸ್ ಠಾಣೆ, ಗುನ್ನೆ ಸಂ.78/2017, ಕಲಂ 20(ಬಿ) ಎನ್.ಡಿ.ಪಿ.ಎಸ್ ಕಾಯ್ದೆ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್.ಡಿ.ಪಿ.ಎಸ್ ಕಾಯ್ದೆಯ ಮ್ಯಂಡೇಟರಿ ಪ್ರಾವಿಜನ್ ಪ್ರಕಾರ ಕೈಗೊಳ್ಳಬೇಕಾದ ಕ್ರಮಗಳ ಕಲಂ 41 & 42 ಅಡಿಯಲ್ಲಿ ಸದರಿ ದಾಳಿಯ ಕುರಿತು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ, ಅನುಮತಿ ಪಡೆದುಕೊಳ್ಳದೇ ಇರುವುದು ಮತ್ತು ಸದರಿ ದಾಳಿಯ ಕುರಿತು ಠಾಣೆಯ ದಿನಚರಿಯಲ್ಲಿ ನಮೂದೆ ಮಾದೇ ಇರುವುದು ದಾಖಲಾತಿಗಳ ಪರಿಶೀಲನೆಯಿಂದ ಕಂಡುಬಂದ ಹಿನ್ನಲೆಯಲ್ಲಿ ಮಾನ್ಯ ನ್ಯಾಯಾಲಯವು ಸದರಿ ಪ್ರಕರಣವನ್ನು ಖುಲಾಸೆಗೊಳಿಸಿರುತ್ತದೆ. | ಕ್ರಮ ಕೈಗೊಳ್ಳಲಾಗುತ್ತಿದೆ. |

| | | | |
|---|---|---|---|
| 03 | ಶ್ರೀ ಹಸನ್ ಸಾಬ್, ನಿವೃತ್ತ ಪಿಐ | ಕುಡುತಿನಿ ಪೊಲೀಸ್ ಠಾಣೆ, ಗುನ್ನೆ ಸಂ.79/2017, ಕಲಂ 20(ಬಿ) ಎನ್.ಡಿ.ಪಿ.ಎಸ್ ಕಾಯ್ದೆ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್.ಡಿ.ಪಿ.ಎಸ್ ಕಾಯ್ದೆಯ ಮ್ಯಂಡೇಟರಿ ಪ್ರಾವಿಜನ್ ಪ್ರಕಾರ ಕೈಗೊಳ್ಳಬೇಕಾದ ಕ್ರಮಗಳ ಕಲಂ 41 & 42 ಅಡಿಯಲ್ಲಿ ಸದರಿ ದಾಳಿಯ ಕುರಿತು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ, ಅನುಮತಿ ಪಡೆದುಕೊಳ್ಳದೇ ಇರುವುದು ಮತ್ತು ಸದರಿ ದಾಳಿಯ ಕುರಿತು ಠಾಣೆಯ ದಿನಚರಿಯಲ್ಲಿ ನಮೂದೆ ಮಾದೇ ಇರುವುದು ದಾಖಲಾತಿಗಳ ಪರಿಶೀಲನೆಯಿಂದ ಕಂಡುಬಂದ ಹಿನ್ನಲೆಯಲ್ಲಿ ಮಾನ್ಯ ನ್ಯಾಯಾಲಯವು ಸದರಿ ಪ್ರಕರಣವನ್ನು ಖುಲಾಸೆಗೊಳಿಸಿರುತ್ತದೆ. | ಕ್ರಮ ಕೈಗೊಳ್ಳಲಾಗುತ್ತಿದೆ. |
| 04 | ಶ್ರೀ ಹಸನ್ ಸಾಬ್, ನಿವೃತ್ತ ಪಿಐ ಮತ್ತು ಶ್ರೀ ವಿ.ನರಸಿಂಹ ಮೂರ್ತಿ, ನಿವೃತ್ತ ಎಎಸ್ಐ | ಕುಡುತಿನಿ ಪೊಲೀಸ್ ಠಾಣೆ, ಗುನ್ನೆ ಸಂ.79/2017, ಕಲಂ 20(ಬಿ) ಎನ್.ಡಿ.ಪಿ.ಎಸ್ ಕಾಯ್ದೆ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್.ಡಿ.ಪಿ.ಎಸ್ ಕಾಯ್ದೆಯ ಮ್ಯಂಡೇಟರಿ ಪ್ರಾವಿಜನ್ ಪ್ರಕಾರ ಕೈಗೊಳ್ಳಬೇಕಾದ ಕ್ರಮಗಳ ಕಲಂ 41 & 42 ಅಡಿಯಲ್ಲಿ ಸದರಿ ದಾಳಿಯ ಕುರಿತು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ, ಅನುಮತಿ ಪಡೆದುಕೊಳ್ಳದೇ ಇರುವುದು ಮತ್ತು ಸದರಿ ದಾಳಿಯ ಕುರಿತು ಠಾಣೆಯ ದಿನಚರಿಯಲ್ಲಿ ನಮೂದೆ ಮಾದೇ ಇರುವುದು ದಾಖಲಾತಿಗಳ ಪರಿಶೀಲನೆಯಿಂದ ಕಂಡುಬಂದ ಹಿನ್ನಲೆಯಲ್ಲಿ ಮಾನ್ಯ ನ್ಯಾಯಾಲಯವು ಸದರಿ ಪ್ರಕರಣವನ್ನು ಖುಲಾಸೆಗೊಳಿಸಿರುತ್ತದೆ. | ಕಾರಣ ಕೇಳುವ ನೋಟೀಸ್‌ನ್ನು ಹೊರಡಿಸಲಾಗಿದೆ. |